13 ಆಗಸ್ಟ್ 2025 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 155 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿ ವೇಳೆ ತಂಡವನ್ನು ಸೇರುವ ನಿರೀಕ್ಷೆಯಲ್ಲಿ ಟೀಮ್ ಇಂಡಿಯಾದ ಏಕದಿನ ತಂಡದ ನಾಯಕ ರೋಹಿತ್ ಶರ್ಮಾ ಅಭ್ಯಾಸ ಆರಂಭಿಸಿದ್ದಾರೆ.



ದಿಕ್ಕಿಲ್ಲದೇ ಸಾಗುತ್ತಿರುವ ತನಿಖೆಗೆ ಬೇಕಿದೆ ಲಗಾಮು » 2

ಮಣಚನಹಳ್ಳಿಯಲ್ಲಿ ಶಾಲೆಯ ನಡಿಗೆ ಹಳ್ಳಿಯ ಕಡೆಗೆ » 3

ಹೊಸ ಆದಾಯ ತೆರಿಗೆ ಮಸೂದೆಗೆ ಅಂಗೀಕಾರ » 4

ವಿದ್ಯಾರ್ಥಿನಿ ಹಠಾತ್ ಸಾವು

• ಪ್ರಜೋದಯ ವರದಿ

ಕೊಣನೂರು: ಮಲಗಿದ ಸ್ಥಿತಿಯಲ್ಲೇ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕು ಸರಗೂರು ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ನಾಗರಾಜು ಹಾಗು ಭಾಗ್ಯಮ್ಮ ಅವರ ಪುತ್ರಿ ಹರ್ಷಿತಾ (17) ಮೃತ ದುರ್ದೈವಿ. ರಾಮನಾಥಪುರ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದ ಹರ್ಷಿತಾ ಕಾಲೇಜು ಮುಗಿಸಿ ಸಂಜೆ 4 ಗಂಟೆಗೆ ಮನೆಗೆ ಬಂದಿದ್ದರು. ಎಂದಿನಂತೆ ಮನೆಯಲ್ಲಿ ಮಲಗಿದ್ದ ಹರ್ಷಿತಾಳನ್ನು ಸಂಜೆ 6 ಗಂಟೆಗೆ ತಾಯಿ ಎಬ್ಬಿಸಲು ಹೋದಾಗ ಮೃತಪಟ್ಟಿರುವುದು ಗೊತ್ತಾಗಿದೆ. ತಕ್ಷಣವೇ ಕೊಣನೂರು ಆಸ್ಪತ್ರೆಗೆ ಕರತರಲಾಯಿತಾದರೂ ಮೃತಪಟ್ಟಿರುವುದನ್ನು ವೈದ್ಯರು ಖಚಿತಪಡಿಸಿದ್ದಾರೆ. ಹೃದಯಾಘಾತದಿಂದ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ವಜಾಕ್ಕೆ ಕಾರಣ ನೀಡಿ: ಕಲಾಪ ಕೋಲಾಹಲ

ಅಧಿವೇಶನದಲ್ಲಿ ಮಾರ್ದನಿಸಿದ ಕೆ.ಎನ್.ರಾಜಣ್ಣ ಸಸ್ಪೆಂಡ್ | ಸರ್ಕಾರಕ್ಕೆ ಬಿಜೆಪಿ ತರಾಟೆ, ಚರ್ಚೆಗೆ ಬಿಗಿ ಪಟ್ಟು

• ಪ್ರಜೋದಯ ವರದಿ

ಬೆಂಗಳೂರು: ಸಚಿವ ಸಂಪುಟದಿಂದ ಕೆ.ಎನ್.ರಾಜಣ್ಣ ಅವರನ್ನು ವಜಾಗೊಳಿಸಿರುವುದು ಮಂಗಳವಾರ ವಿಧಾನಸಭೆಯಲ್ಲಿ ಭಾರೀ ಕೋಲಾಹಲಕ್ಕೆ ಕಾರಣವಾಯಿತು. ಪ್ರತಿಪಕ್ಷಗಳಾದ ಬಿಜೆಪಿ ಹಾಗು ಜೆಡಿಎಸ್ ರಾಜಣ್ಣ ವಜಾಕ್ಕೆ ಕಾರಣ ತಿಳಿಸುವಂತೆ ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಮುಗಿಬಿದ್ದವು.

ವಿಧಾನಸಭೆ ಕಲಾಪದಲ್ಲೂ ರಾಜಣ್ಣ ವಿಚಾರವೇ ಮಾರ್ದನಿಸಿದ್ದು, ಪ್ರತಿಪಕ್ಷ ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ರಾಜಣ್ಣ ಅವರ ವಜಾಕ್ಕೆ ಸರ್ಕಾರ ಕಾರಣ ನೀಡಲೇಬೇಕೆಂದು ವಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯಿಸಿದರು. ಆದರೆ, ಸರ್ಕಾರ ಮಾತ್ರ ಚರ್ಚೆಯಿಂದ ದೂರವಿದ್ದು, ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವ ಅಧಿಸೂಚನೆಯನ್ನು ಮಂಡಿಸಿದ್ದು ಕುತೂಹಲ ಕೆರಳಿಸಿತು.

ಪ್ರಶ್ನೋತ್ತರ ಅವಧಿ ಮತ್ತು ಶೂನ್ಯ ವೇಳೆಯ ನಂತರ ವಿಧಾನಸಭೆಯಲ್ಲಿ ರಾಜಣ್ಣ ಅವರನ್ನು ವಜಾಗೊಳಿಸಿದ ಅಧಿಸೂಚನೆಯನ್ನು ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್, ಯಾವುದೇ ಸಚಿವರು ಸಚಿವ ಸಂಪುಟದಿಂದ ಹೊರಬಂದರೆ ಅವರು ಸ್ಪೀಕರ್ ಅನುಮತಿಯೊಂದಿಗೆ ಹೇಳಿಕೆ ನೀಡಬಹುದು. ಆದರೆ, ಅದನ್ನು ಮೀರಿ ನಿಯಮಗಳ ಪ್ರಕಾರ ಯಾವುದೇ ಚರ್ಚೆ ಅಥವಾ ವಿವರಣೆಯನ್ನು ಅನುಮತಿಸಲಾಗುವುದಿಲ್ಲ ಎಂದು ಹೇಳಿದರು.

ಈ ಹಂತದಲ್ಲಿ, ವಿರೋಧ ಪಕ್ಷದ ಉಪ ನಾಯಕ ಅರವಿಂದ್ ಬೆಲ್ಲದ್ ಮತ್ತು ಹಿರಿಯ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು ಕಾನೂನು ಸಚಿವರಲ್ಲ, ಮುಖ್ಯ ಮಂತ್ರಿ ಈ ವಿಷಯವನ್ನು ತಿಳಿಸಬೇಕೆಂದು ಒತ್ತಾಯಿಸಿದರು.

ಆದಾಗ್ಯೂ, ಪಾಟೀಲ್ ಮುಂದುವರಿಸಿ, ಸಚಿವರನ್ನು ಸರ್ಕಾರಗಳಿಂದ ತೆಗೆದುಹಾಕುವ ಹಿಂದಿನ ಸಂದರ್ಭಗಳಲ್ಲಿ, ವಿಧಾನಸಭೆಯಲ್ಲಿ ಯಾವುದೇ ಚರ್ಚೆಗಳು ನಡೆದಿಲ್ಲ. ಉದಾಹರಣೆಗೆ ಜಗದೀಪ್ ಧನ್ಕರ್ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ, ಅದರ ಬಗ್ಗೆ ಚರ್ಚೆ ನಡೆದಿತ್ತೇ, ರಾಜೀನಾಮೆ ವಜಾಗೊಳಿಸುವುದಕ್ಕಿಂತ ಭಿನ್ನವಾಗಿದೆ ಎಂದು ಬಿಜೆಪಿ ಸದಸ್ಯರು ಸೂಚಿಸಿದರು. ಈ ವೇಳೆ ಮಾತನಾಡಿದ ಅರವಿಂದ್ ಬೆಲ್ಲದ್, ರಾಜಣ್ಣ ಅವರ ತಪ್ಪು ಏನು, ರಾಜ್ಯದ ಜನರು ತಿಳಿದುಕೊಳ್ಳಬೇಕು, ಸತ್ಯ ಹೇಳಿದ್ದಕ್ಕಾಗಿ ಅವರನ್ನು ವಜಾಗೊಳಿಸಲಾಗಿದೆಯೇ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಯಾಗಿ, ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪಕ್ಷದಿಂದ ಏಕೆ ಹೊರಹಾಕಲಾಯಿತು ಎಂದು

» ನಾಲ್ಕನೇ ಪುಟದಲ್ಲಿ

ಸಿದ್ದರಾಮಯ್ಯ ಉತ್ತರಿಸಲು ಒತ್ತಾಯ

ಸದನ ಸೇರಿದಾಗ, ರಾಜಣ್ಣ ಅವರನ್ನು ಸಂಪುಟದಿಂದ ತೆಗೆದು ಹಾಕಿರುವ ಬಗ್ಗೆ ಮುಖ್ಯಮಂತ್ರಿ ಹೇಳಿಕೆ ನೀಡಬೇಕೆಂದು ಬಿಜೆಪಿ ಒತ್ತಾಯಿಸಿತು. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವಿಧಾನಸಭೆ ಅಧಿವೇಶನ ನಡೆಯುತ್ತಿರುವುದರಿಂದ ಸದನಕ್ಕೆ ತಿಳಿಸುವುದು ಮುಖ್ಯಮಂತ್ರಿ ಮತ್ತು ಸರ್ಕಾರದ ಕರ್ತವ್ಯ ಎಂದು ಹೇಳಿದರು. ಇದಕ್ಕೆ ಸ್ಪೀಕರ್ ಯು.ಟಿ.ಖಾದರ್, ಮುಖ್ಯಮಂತ್ರಿ ಸದನಕ್ಕೆ ಬಂದಾಗ ಮಾಹಿತಿ ನೀಡಬಹುದು ಮತ್ತು ಇದು ಆಂತರಿಕ ವಿಷಯವಾಗಿದೆ ಎಂದು ಹೇಳಿದರು. ಆಗ ಬಿ.ವೈ.ವಿಜಯೇಂದ್ರ, ಸುನೀಲ್ ಕುಮಾರ್ ಮತ್ತು ಇತರರು, ಇದು ಹೇಗೆ ಆಂತರಿಕ ವಿಷಯ ಎಂದು ಕೇಳಿದರು. ರಾಹುಲ್ ಗಾಂಧಿ ಅವರು ಮತ ಕಳ್ಳತನದ ಬಗ್ಗೆ ಚುನಾವಣಾ ಆಯೋಗದ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ಸತ್ಯವನ್ನು ಹೇಳಿದ್ದಕ್ಕಾಗಿ ಅವರನ್ನು ತೆಗೆದುಹಾಕಲಾಗಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದರು.

ಕಾಲ್ತುಳಿತ : ಸಿಬಿಐ ತನಿಖೆಗೆ ಆಗ್ರಹ

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ನಡೆದ ಕಾಲ್ತುಳಿತ ಪ್ರಕರಣದ ಹೊಣೆಯನ್ನು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಾಗು ಡಾ.ಜಿ. ಪರಮೇಶ್ವರ್ ಹೊರಬೇಕು. ಘಟನೆಯ ತನಿಖೆಯನ್ನು ಸಿಬಿಐಗೆ ನೀಡಬೇಕೆಂದು ಪ್ರತಿಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದರು. ನಿಯಮ 69 ಅಡಿಯಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ಜನರನ್ನು ಕರೆತಂದಿದ್ದು ಸರ್ಕಾರ, ಸಂಭ್ರಮಾಚರಣೆ ಮಾಡಿಸಿದ್ದು ಸರ್ಕಾರ. ಫೋಟೋ ಅವಕಾಶಕ್ಕಾಗಿ ಜನರನ್ನು ಬಲಿ ತೆಗೆದುಕೊಂಡಿದ್ದೀರಿ ಎಂದು ಆರೋಪಿಸಿದರು.

ಕೇಂದ್ರದಿಂದ 2.84 ಲಕ್ಷ ಟನ್ ಗೊಬ್ಬರ ಬಾಕಿ

• ಪ್ರಜೋದಯ ವರದಿ

ಬೆಂಗಳೂರು: ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 2.84 ಲಕ್ಷ ಟನ್‌ಗಳಷ್ಟು ಗೊಬ್ಬರ ಬಾಕಿ ಉಳಿಸಿಕೊಂಡಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಹೇಳಿದರು.

ವಿಧಾನ ಪರಿಷತ್ತಿನ ಮಂಗಳವಾರದ ಕಲಾಪದ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಅವರು ರಸಗೊಬ್ಬರದ ಕೊರತೆ ಬಗ್ಗೆ ಪ್ರಸ್ತಾಪಿಸಿದರು. ರಾಜ್ಯ ಸರ್ಕಾರವು ಅಗತ್ಯವಿರುವಷ್ಟು ಪ್ರಮಾಣದ ಗೊಬ್ಬರವನ್ನು ಪೂರೈಸಿ ಎಂದು ಕೇಂದ್ರಕ್ಕೆ ಮೊದಲೇ ಪತ್ರ ಬರೆದು ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಅದರಿಂದ ರೈತರು ತೊಂದರೆ ಅನುಭವಿಸುವುದು ತಪ್ಪುತ್ತಿತ್ತು ಎಂದರು.

ಚಲುವರಾಯಸ್ವಾಮಿ ಅವರು ಪ್ರತಿಕ್ರಿಯಿಸಿ, ಈ ಸಾಲಿನ ಮುಂಗಾರಿಗೆ ರಾಜ್ಯಕ್ಕೆ 12.95 ಲಕ್ಷ ಟನ್‌ಗಳಷ್ಟು ಗೊಬ್ಬರದ ಅಗತ್ಯವಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಕೇಂದ್ರವು ರಾಜ್ಯಕ್ಕೆ ಮಂಜೂರು ಮಾಡಿದ್ದು 11.17 ಲಕ್ಷ ಟನ್ ಮಾತ್ರ. ಮುಂಚಿತವಾಗಿ ಮನವಿ ಸಲ್ಲಿಸಿದ್ದರೂ ಅದಕ್ಕಿಂತ ಕಡಿಮೆ ಗೊಬ್ಬರ ಮಂಜೂರು ಮಾಡಿತು ಎಂದು ಸದನಕ್ಕೆ ಮಾಹಿತಿ ನೀಡಿದರು.

ಗೊಬ್ಬರ ಆಮದು, ತಯಾರಿಕೆ, ಹಂಚಿಕೆ ಎಲ್ಲವೂ ಕೇಂದ್ರ ಸರ್ಕಾರದ್ದೇ ಹೊಣೆಗಾರಿಕೆ. ಏಪ್ರಿಲ್‌ಜುಲೈ ಅವಧಿಗೆ ಹಂಚಿಕೆಯಾಗಿದ್ದ ಗೊಬ್ಬರದಲ್ಲಿ ಕೇಂದ್ರವು ನಮಗೆ 1.27 ಲಕ್ಷ ಟನ್‌ಗಳಷ್ಟು ಕಡಿಮೆ ಗೊಬ್ಬರ ಪೂರೈಸಿತ್ತು. ಹೀಗಿದ್ದೂ ಲಭ್ಯವಿರುವ ಗೊಬ್ಬರವನ್ನು ಸಮರ್ಥವಾಗಿ ವಿತರಣೆ ಮಾಡುತ್ತಿದ್ದೆವು. ವಿರೋಧ ಪಕ್ಷಗಳ ನಾಯಕರು ಸುಮ್ಮನೆ ಗೊಬ್ಬರ ಕೊರತೆ ಎಂದು ಆರೋಪ ಮಾಡಿದ್ದರಿಂದ ಸಮಸ್ಯೆ ಎದುರಾಯಿತು ಎಂದರು.

ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ನಮಗೆ ಹಂಚಿಕೆಯಾದ ಒಟ್ಟು ಗೊಬ್ಬರದಲ್ಲಿ ಇನ್ನೂ 2.84 ಲಕ್ಷ ಟನ್ ಪೂರೈಕೆಯಾಗಿಲ್ಲ. ಕೇಂದ್ರ ಸರ್ಕಾರದಿಂದ ಇಷ್ಟು ದೊಡ್ಡ ಪ್ರಮಾಣದ ಗೊಬ್ಬರ ಬರಬೇಕಿದ್ದರೂ, ರೈತರಿಗೆ ತೊಂದರೆ ಆಗದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿದ್ದೇವೆಂದರು.

ಹೆತ್ತ ಮಗನನ್ನೇ ಕೊಂದು ಮನೆ ಹಿಂದೆ ಹೂತಿದ್ದ ತಂದೆ

ತಂದೆಯ ಸಾವಿನ ಬಳಿಕ ರಹಸ್ಯ ಬಯಲು | ಜೀವಕ್ಕೆ ಹೆದರಿ ಸುಮ್ಮನಿದ್ದ ಮತ್ತೊಬ್ಬ ಮಗ

• ಪ್ರಜೋದಯ ವರದಿ

ಆಲೂರು: ಹಣಕ್ಕಾಗಿ ಪೀಡಿಸುತ್ತಿದ್ದ ಮಗನನ್ನು ತಂದೆಯೇ ಕೊಂದು ಮನೆ ಹಿಂಭಾಗ ಹೂತು ಹಾಕಿದ್ದ ಆಘಾತಕಾರಿ ಘಟನೆ ಆತನ ಮರಣದ ಬಳಿಕ ಬೆಳಕಿಗೆ ಬಂದಿದೆ.

ತಾಲ್ಲೂಕಿನ ಸಂತೆಬಸವನಹಳ್ಳಿ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಮಂಗಳವಾರ ಪೊಲೀಸರು ಹೂತಿದ್ದ ಶವವನ್ನು ಹೊರತೆಗೆದಿದ್ದಾರೆ. ಗ್ರಾಮದ ರಘು (32) ಎಂಬುವವರನ್ನು 2023ರ ಆಗಸ್ಟ್‌ನಲ್ಲಿ ತಂದೆ ಗಂಗಾಧರ ಕೊಂದಿದ್ದ. ಈ ಘಟನೆ ಗ್ರಾಮಸ್ಥರನ್ನು ಬೆಚ್ಚಿ ಬೀಳಿಸಿದೆ.

ಘಟನೆ ಹಿನ್ನಲೆ

ಗಂಗಾಧರ ಅವರ ಪತ್ನಿ 2019ರಲ್ಲಿ ಮೃತಪಟ್ಟಿದ್ದರು. ಹತ್ಯೆಗೀಡಾದ ರಘು ಬಿಎಂಟಿಸಿ ಉದ್ಯೋಗಿಯಾಗಿದ್ದು, ವಿಪರೀತ ಮದ್ಯವ್ಯಸನಿ ಹಾಗು ಮಾನಸಿಕ ಅಸ್ವಸ್ಥನಾಗಿದ್ದರಿಂದ ಸೇವೆಯಿಂದ ವಜಾಗೊಳಿಸಲಾಗಿತ್ತು. ಪತ್ನಿಯೂ ರಘು ವಿಚ್ಛೇದನ ಪಡೆದಿದ್ದರು. ತಂದೆ ಗಂಗಾಧರ, ಕಿರಿಯ ಸಹೋದರ

ರೂಪೇಶ್ ಜೊತೆ ರಘು ವಾಸವಿದ್ದ. ನಿರುದ್ಯೋಗಿಯಾಗಿದ್ದ ರಘು ಹಣ ಕೊಡುವಂತೆ ಆಗಾಗ ತಂದೆಯೊಂದಿಗೆ ಜಗಳ ತೆಗೆಯುತ್ತಿದ್ದ ಎನ್ನಲಾಗಿದೆ.

2023ರ ಆ.14ರಂದು ಗಂಗಾಧರ ಹಾಗು ರಘು ನಡುವೆ ಶುರುವಾದ ಗಲಾಟೆ ವಿಕೋಪಕ್ಕೆ ತಿರುಗಿ ಬಲವಾಗಿ ಹೊಡೆದಿದ್ದರಿಂದ ರಘು ಸ್ಥಳದಲ್ಲೇ ಮೃತಪಟ್ಟಿದ್ದ. ಮನೆಗೆ ದಿನಸಿ ಸಾಮಾಗ್ರಿ ತರಲೆಂದು ಅಂಗಡಿಗೆ ಹೋಗಿದ್ದ ಕಿರಿಯ ಪುತ್ರ ರೂಪೇಶ್ ಮನೆಗೆ ಬಂದಾಗ ಅಣ್ಣನ ಕೊಲೆ ಕಂಡು ಬೆಚ್ಚಿಬಿದ್ದಿದ್ದ. ಅಲ್ಲೇ ಇದ್ದ ಗಂಗಾಧರ, ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ನಿನ್ನನ್ನು ಇದೇ ರೀತಿ ಕೊಲೆ ಮಾಡುತ್ತೇನೆಂದು ಹೆದರಿಸಿದ್ದ. ಜೀವಭಯದಿಂದ ರೂಪೇಶ್ ಏನೂ ಗೊತ್ತಿಲ್ಲದವನಂತೆ ಸುಮ್ಮನಿದ್ದ.

ಆ.15 ರಂದು ಮಗ್ಗೆಯಿಂದ 10 ಚೀಲ ಸುಣ್ಣ ತಂದು ರಾತ್ರಿ ಮೃತ ದೇಹವನ್ನು ಮನೆಯ ಹಿಂದಿನ ಗುಂಡಿಗೆ ಹಾಕಿ ಅದರ ಮೇಲೆ ಸುಣ್ಣ ಸುರಿದು ನೀರು ಬಿಟ್ಟು ಬಳಿಕ ಸಗಣಿ ಹಾಕಿ ಮೇಲೆ ಸಿಮೆಂಟ್ ಶೀಟ್ ಹಾಕಿ ಸಾಕ್ಷ್ಯ ನಾಶ ಮಾಡಿದ್ದ. ಯಾರೇ

» ನಾಲ್ಕನೇ ಪುಟದಲ್ಲಿ

ಧರ್ಮಸ್ಥಳ ಪಾವಿತ್ರ್ಯತೆಗೆ ಧಕ್ಕೆ ಖಂಡಿಸಿ ಸಂಘಟನೆಗಳ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಧರ್ಮಸ್ಥಳದಲ್ಲಿ ಅಸಹಜ ಕೊಲೆ ಹೆಸರಿನಲ್ಲಿ ಧಾರ್ಮಿಕ ಪಾವಿತ್ರ್ಯತೆಗೆ ಧಕ್ಕೆ ತರಲು ವ್ಯವಸ್ಥಿತ ಪಿತೂರಿ ನಡೆಯುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಶ್ರೀ ಕ್ಷೇತ್ರ ಧರ್ಮಸ್ಥಳ ಹಿತ ರಕ್ಷಣಾ ಸಮಿತಿ, ಧರ್ಮಸ್ಥಳ ವೃಂದಗಳ ವೇದಿಕೆ ಹಾಗು ಇತರ ಸಂಘ-ಸಂಸ್ಥೆಗಳ ನೇತೃತ್ವದಲ್ಲಿ ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಎನ್.ಆರ್. ವೃತ್ತ ಹಾಗು ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಮಾನವ ಸರಪಳಿ ನಿರ್ಮಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು ಬೈಕ್ ರ್‍ಯಾಲಿ ಮೂಲಕ ಪ್ರತಿಭಟನೆಯಲ್ಲಿ ಭಾಗವಹಿಸಿದರು. ವಿಶೇಷ ಭೂಸ್ವಾಧೀನಾಧಿಕಾರಿ ಮಂಜುನಾಥ್ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಬಿಜೆಪಿ ಮುಖಂಡ ನವಿಲೆ ಅಣ್ಣಪ್ಪ ಅವರು ಮಾತನಾಡಿ, ಅನಾಮಿಕ ನೀಡಿದ ದೂರಿನ ಅನ್ವಯ ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿದೆ. ಕಳೆದ 15 ದಿನಗಳಿಂದ ಧರ್ಮಸ್ಥಳದಲ್ಲಿ ಅಸ್ಥಿಪಂಜರ ಶೋಧ ಕಾರ್ಯ ನಡೆಯುತ್ತಿದೆ. ಇದುವರೆಗೆ ಗುರುತರ ಸಾಕ್ಷ್ಯಾಧಾರ ಸಿಕ್ಕಿಲ್ಲ. ಧರ್ಮಸ್ಥಳ ಮಂಜುನಾಥ ಸ್ವಾಮಿ, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಹೆಸರಿಗೆ ಮಸಿ ಬಳಿಯುವ ಷಡ್ಯಂತ್ರ ಇದಾಗಿದೆ. ಹಿಂದೂಗಳ ಧಾರ್ಮಿಕ ಭಾವನೆಗಳ ಮೇಲೆ ವ್ಯವಸ್ಥಿತ ಪ್ರಹಾರ ನಡೆಯುತ್ತಿದೆ. ಶವ ಹೂತಿರುವುದಾಗಿ ಹೇಳುತ್ತಿರುವ ಅನಾಮಿಕ ಯಾರೆಂಬುದು ಗೊತ್ತಿಲ್ಲ. ಆತ ಮುಂದೊಂದು ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಯನ್ನು ಅಗೆಯಬೇಕೆಂದು ಬಯಸಿದರೆ ಸರ್ಕಾರ ಅನುಮತಿ ನೀಡುತ್ತದೆಯೇ ಎಂದು ಪ್ರಶ್ನಿಸಿದರು.

ದಕ್ಷಿಣ ಭಾರತದ ಮತ್ತು ಕರ್ನಾಟಕದ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯ 800 ವರ್ಷಗಳ ಇತಿಹಾಸ ಹೊಂದಿದೆ. ಕ್ಷೇತ್ರವು ಕೋಟ್ಯಾಂತರ ಭಕ್ತರು, ಭಾಷೆ ಗಡಿಗಳನ್ನು ಮೀರಿ ಹೊಂದಿದೆ. ಪ್ರತಿನಿತ್ಯ ಮೂವತ್ತರಿಂದ ಐವತ್ತು ಸಾವಿರ ಭಕ್ತರು, ವಿಶೇಷ ದಿನಗಳಲ್ಲಿ ಒಂದು ಲಕ್ಷ ಭಕ್ತರು ಭೇಟಿ ನೀಡುತ್ತಾರೆ. ಧರ್ಮಸ್ಥಳ ಮಂಜುನಾಥ ಸ್ವಾಮಿ ನೆಲೆಯೂರಿರುವ ಪವಿತ್ರ ಸ್ಥಳದ ಹೆಸರು ಉಪಯೋಗಿಸಿ ಕ್ಷೇತ್ರ ಹಾಗು ಧರ್ಮಾಧಿಕಾರಿಗೆ ಕಳಂಕ ತರುವ, ಪಾವಿತ್ರ್ಯಕ್ಕೆ ಧಕ್ಕೆಯುಂಟು ಮಾಡುವ ಕೀಳು ಮಟ್ಟದ ಭಾಷೆ ಬಳಸಿ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುತ್ತಿರುವುದು ಖಂಡನೀಯ ಎಂದರು.

ನೂರಾರು ಶವ ಹೂತು ಹಾಕಿರುವುದಾಗಿ ಹೇಳಿರುವ ಅನಾಮಿಕನನ್ನು ಮಂಪರು ಪರೀಕ್ಷೆಗೆ ಒಳಪಡಿಸಿ ತನಿಖೆಗೊಳಪಡಿಸಬೇಕು. ಆತನ ಬೆಂಬಲಕ್ಕೆ ನಿಂತಿರುವವರ ಪೂರ್ವಾಪರ ತಿಳಿಯಬೇಕು. ತನಿಖಾ ವರದಿಯನ್ನು ಬಹಿರಂಗೊಳಿಸಬೇಕು. ಧರ್ಮಸ್ಥಳ ಧರ್ಮಾಧಿಕಾರಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಿ, ಧಾರ್ಮಿಕ ಭಾವನೆಗಳನ್ನು ಘಾಸಿಗೊಳಿಸಿ ಕೃತ್ಯಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಲೇಖಕ ಡಾ.ಎನ್.ರಮೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ರಿತೇಶ್, ಬಾಳ್ಳುಗೋಪಾಲ್, ರಾಜಾ ವೆಂಕಟೇಶ್, ಪ್ರೇಮಕುಮಾರ್, ಸಾಯಿ ಪ್ರಸಾದ್, ಕಟ್ಟಾಯ ಶಿವಕುಮಾರ್, ವಿವಿಧ ಮಹಿಳಾಪರ ಸಂಘಟನೆಗಳ ಕಾರ್ಯಕರ್ತರು ಹಾಜರಿದ್ದರು.

ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ಕುಸಿತ : ಆರೋಪ

• ಪ್ರಜೋದಯ ವರದಿ

ದಿಕ್ಕಿಲ್ಲದೇ ಸಾಗುತ್ತಿರುವ ತನಿಖೆಗೆ ಬೇಕಿದೆ ಲಗಾಮು

ದಿನಕ್ಕೊಂದು ಗುಂಡಿ ತೋಡಿ ತೆಂಗಿನ ತೋಪು ಮಾಡುವುದು ಎಸ್‌ಐಟಿ ಉದ್ದೇಶವೇ?

ಬುರುಡೆ ಬಗ್ಗೆ ಬುರುಡೆ ಬಿಟ್ಟ ಮುಸುಕುಧಾರಿ ಅನಾಮಿಕ ವ್ಯಕ್ತಿಯ ವಿಶ್ವಾಸಾರ್ಹತೆ ಏನು?

ಧರ್ಮಸ್ಥಳದ ಸುತ್ತಮುತ್ತ ಸರಣಿ ಕೊಲೆ ನಡೆದಿವೆ ಎನ್ನಲಾದ ಪ್ರಕರಣಕ್ಕೆ ಬೇಕಿದೆ ಬ್ರೇಕ್

ದಿಕ್ಕಿಲ್ಲದ ವ್ಯಕ್ತಿಯೊಬ್ಬನ ಹೇಳಿಕೆಯಿಂದ ಶುರುವಾದ ಗುಂಡಿ ಅಗೆಯುವ ಕಾರ್ಯ ಇದೀಗ ಬಾಹು ಬಲಿ ಬೆಟ್ಟದ ಬಳಿ ಬಂದು ನಿಂತಿದೆ. ಸಾವಿರಾರು ಹೆಣಗಳನ್ನು ಹೂತಿದ್ದೇನೆ ಎಂದು ಬುರುಡೆ ಬಿಟ್ಟಿದ್ದ ವ್ಯಕ್ತಿ ಗುರುತಿಸಿದ್ದ ಸ್ಥಳದಲ್ಲಿ ಸಿಕ್ಕಿದ್ದು ಬರೀ ಮಣ್ಣಾದರೂ, ಎಸ್‌ಐಟಿ ಮಾತ್ರ ತನ್ನ ಅಗೆಯುವ ಕಾರ್ಯದಿಂದ ಹಿಂದೆ ಸರಿದಿಲ್ಲ.

ನಿತ್ಯ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಅರ್ಥವಿಲ್ಲದ ತನಿಖೆಯನ್ನು ಕೂಡಲೇ ಸ್ಥಗಿತಗೊಳಿಸದಿದ್ದರೆ ವಿಶೇಷ ತನಿಖಾ ತಂಡದ ಅಣಕವಾಗುವುದರಲ್ಲಿ ಅನುಮಾನವಿಲ್ಲ. ರಾಜ್ಯದಲ್ಲಿ ಕಳೆದೊಂದು ತಿಂಗಳಿನಿಂದ ಸದ್ದು ಮಾಡುತ್ತಿರುವ ಮುಸುಕುಧಾರಿ ವ್ಯಕ್ತಿಯ ಬುರುಡೆ ರಹಸ್ಯ ಆರಂಭದಲ್ಲಿ ರೋಚಕವಾಗಿ ಕಂಡರೂ, ಗುಂಡಿ ತೋಡುವ ಕಾರ್ಯಾರಂಭಗೊಂಡು ನಿತ್ಯ ಖಾಲಿ ಕೈಯಲ್ಲಿ ವಾಪಸಾಗಿದ್ದರಿಂದ ಎಸ್‌ಐಟಿಯ ತನಿಖೆಗೇ ಅರ್ಥವಿಲ್ಲದಂತಾಗಿದೆ.

ಇಷ್ಟಾದರೂ, ಆತ ತೋರಿಸಿದ ಕಡೆಯಲ್ಲ ಗುಂಡಿ ಅಗೆಯಲು ಹೋಗುತ್ತಿರುವುದು ತಂಡಕ್ಕಿರುವ ಗಾಂಭೀರ್ಯತೆಯನ್ನು ಕಡಿಮೆಗೊಳಿಸುತ್ತಿದೆ ಎನ್ನುವುದು ಸ್ಪಷ್ಟ. ಕೆಲ ತಿಂಗಳ ಹಿಂದೆ ಏಕಾಏಕಿ ಮುನ್ನೆಲೆಗೆ ಬಂದ ಈ ಮುಸುಕುಧಾರಿ ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿಟ್ಟಿದ್ದೇನೆ ಎಂದು ನ್ಯಾಯಾಲಯದ ಮುಂದೆ ಹೇಳಿಕೆ ನೀಡುತ್ತಿದ್ದಂತೆ ರಾಜ್ಯವಷ್ಟೇ ಅಲ್ಲ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಈ ಸುದ್ದಿ ಸದ್ದಾಗಿತ್ತು.

ಈತನ ಸಾಕ್ಷ್ಯವಿಲ್ಲದ ಹೇಳಿಕೆಯನ್ನೇ ನಂಬಿಕೊಂಡ ಕೆಲವೊಂದಷ್ಟು ಜನರು ಈತನ ಹೇಳಿಕೆಗೆ ಸೌಜನ್ಯಾ ಪ್ರಕರಣವನ್ನು ಸೇರಿಸಿಕೊಂಡು ರೀಲ್ಸ್‌ಗಳನ್ನು ಮಾಡಲು ಶುರು ಮಾಡಿದ್ದರು. ಆದರೆ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ್ದರಿಂದ, ರಾಜ್ಯ ಸರಕಾರ ನಿಷ್ಪಕ್ಷಪಾತ ತನಿಖೆಯ ಉದ್ದೇಶದಿಂದ ವಿಶೇಷ ತನಿಖಾ ತಂಡವನ್ನು ರಚಿಸಿತ್ತು.

ಆರಂಭದಲ್ಲಿ ಎಸ್‌ಐಟಿ ರಚನೆ ಮಾಡಿದ ಸರಕಾರದ ತೀರ್ಮಾನವನ್ನು ಯಾರೊಬ್ಬರೂ ವಿರೋಧಿಸಲಿಲ್ಲ. ಆದರೆ ತನಿಖಾ ತಂಡದ ಕಾರ್ಯನಿರ್ವಹಣೆ, ತನಿಖೆ ನಡೆಸುತ್ತಿರುವ ರೀತಿ ಗಮನಿಸಿ, ತಟಸ್ಥರಾಗಿದ್ದವರೂ ಇದೀಗ ಎಸ್‌ಐಟಿ ತನಿಖೆಯ ದಿಕ್ಕನ್ನು ಪ್ರಶ್ನಿಸುತ್ತಿದ್ದಾರೆ.

15 ಗುಂಡಿಯಲ್ಲಿ ಸಿಗದ ಬುರುಡೆ: ಪ್ರಣಬ್ ಮೊಹಂತಿ ನೇತೃತ್ವದಲ್ಲಿ ರಚನೆಯಾದ ಎಸ್‌ಐಟಿ ಧರ್ಮಸ್ಥಳಕ್ಕೆ ತೆರಳಿ ಅನಾಮಿಕ ವ್ಯಕ್ತಿ ಹೂತಿಟ್ಟಿದ್ದ ಸ್ಥಳಗಳನ್ನು ಗುರುತಿಸಿ, ನಿತ್ಯ ಒಂದೊಂದು ಸ್ಥಳದ ಉತ್ಖನನ ನಡೆಸಿದೆ. ಈವರೆಗೆ 15 ಸ್ಥಳದಲ್ಲಿ ಗುಂಡಿ ತೋಡಿದರೂ ಸಿಕ್ಕಿದ್ದು ಮಾತ್ರ ಬರೀ ಮಣ್ಣು. ಒಂದು ಕಡೆ ಮೂಳೆ ಸಿಕ್ಕರೂ ಪ್ರಾಥಮಿಕ ತನಿಖೆಯಲ್ಲಿಯೇ ಈ ಮೂಳೆಗೂ, ಅನಾಮ ಧೇಯ ಹೂತಿಟ್ಟಿರುವ ಹೆಣಗಳ ಪ್ರಕರಣಕ್ಕೂ ಸಂಬಂಧವಿಲ್ಲ ಎನ್ನುವುದು ಸ್ಪಷ್ಟವಾಯಿತು.

ಉತ್ಖನನ ಪ್ರಕ್ರಿಯೆ ಆರಂಭಗೊಂಡ ಮೂರೇ ದಿನಕ್ಕೆ ಅನಾಮಧೇಯ ವ್ಯಕ್ತಿಯ ಬುರುಡೆ ಆರೋಪದಲ್ಲಿ ಹುರುಳಿಲ್ಲ ಎನ್ನುವುದು ಖಚಿತವಾಗಿದೆ. ಆದರೂ ಎಸ್‌ಐಟಿ ಅಧಿಕಾರಿಗಳು ಆತ ತೋರಿದ ಎಲ್ಲ ಸ್ಥಳಗಳಲ್ಲೂ ಉತ್ಖನನ ಮಾಡುತ್ತಿರುವುದು ಏಕೆ? 15 ಸ್ಥಳಗಳಲ್ಲಿ ಏನೂ ಸಿಗಲಿಲ್ಲವೆಂದ ಮೇಲೆ, ಆತನ ಪೂರ್ವಾಪರದ ಬಗ್ಗೆ ಕನಿಷ್ಠ ವಿಚಾರಣೆ ಮಾಡಬೇಕೆಂದು ಎಸ್‌ಐಟಿ ಅಧಿಕಾರಿಗಳಿಗೆ ಅನಿಸಲೇ ಇಲ್ಲವೇ? ಎನ್ನುವುದು ಈಗಿರುವ ಪ್ರಶ್ನೆಯಾಗಿದೆ.

ಅನಾಮಧೇಯ ವ್ಯಕ್ತಿ ತೋರಿಸಿರುವ ಜಾಗವೆಲ್ಲ ಖಾಲಿಯಾಗಿದ್ದರೂ, ಇದೀಗ ಅಲ್ಲೊಂದು ಇಲ್ಲೊಂದು ಎಂದು ಜಾಗ ಗುರುತಿಸುವ ಕಾರ್ಯ ಮುಂದುವರಿದೇ ಇದೆ. ಸೋಮವಾರ ಬಾಹುಬಲಿ ಬೆಟ್ಟದ ಸುತ್ತ ಮುತ್ತಲೂ ಬುರುಡೆ ಹುಡುಕಾಟ ಮುಂದುವರಿದಿರುವುದು ನಿಜಕ್ಕೂ ಹಾಸ್ಯಾಸ್ಪದ. ಎಸ್‌ಐಟಿಯ ಈ ತನಿಖಾ ಪ್ರಕ್ರಿಯೆಯನ್ನು ಬದಲಾಯಿಸಿಕೊಳ್ಳದಿದ್ದರೆ, ಮುಂದಿನ ಆರು ತಿಂಗಳಲ್ಲಿ ಧರ್ಮಸ್ಥಳದ ಸುತ್ತಮುತ್ತ ಸೃಷ್ಟಿಯಾಗಿರುವ ಗುಂಡಿಗಳಲ್ಲಿ ತೆಂಗಿನ ತೋಪು ಮಾಡಬೇಕಾಗುತ್ತದೆ.

ಆದ್ದರಿಂದ ದಿಕ್ಕುದೆಸೆಯಿಲ್ಲದಂತೆ ನಡೆಯುತ್ತಿರುವ ಈ ತನಿಖೆಯ ವಿಷಯದಲ್ಲಿ ರಾಜ್ಯ ಸರಕಾರ ಕೂಡಲೇ ಮಧ್ಯ ಪ್ರವೇಶಿಸಿ ಸ್ಥಗಿತಗೊಳಿಸಬೇಕು ಎನ್ನುವುದು ಹಲವರ ಆಗ್ರಹವಾಗಿದೆ.

ಕೇವಲ ಬಾಯಿ ಮಾತಿನ ಆರೋಪಕ್ಕೆ ತಿಂಗಳುಗಟ್ಟಲೇ ಇಡೀ ವ್ಯವಸ್ಥೆಯೇ ಗುಂಡಿ ತೋಡುವ ಕಾರ್ಯದಲ್ಲಿ ಮುಳುಗಿದೆ. ಈಗಾಗಲೇ ಇನ್ನೊಬ್ಬ ವ್ಯಕ್ತಿ ಇದೇ ರೀತಿಯ ಆರೋಪವನ್ನು ಮಾಡಿ ನಾನೂ ಮೂರು ಗುಂಡಿ ತೋಡಿಸುವುದಾಗಿ ಹೇಳಿದ್ದಾನೆ.

ಹೀಗಿರುವಾಗ ಆರೋಪಕ್ಕೆ ಸರಿಯಾದ ಮಾಹಿತಿ ಕೇಳದೇ, ಈ ರೀತಿ ಎಸ್‌ಐಟಿ ರಚಿಸುತ್ತಾ ಹೋದರೆ, ಮುಂದೊಂದು ದಿನ ವಿಧಾನ ಸೌಧದ ಬಳಿಕ ಶವ ಹೂತಿದ್ದೆ ಎಂದರೆ ಅಥವಾ



ನಿತ್ಯ ಲಕ್ಷಾಂತರ ರುಪಾಯಿ ಖರ್ಚು ಮಾಡಿ ಅರ್ಥವಿಲ್ಲದ ತನಿಖೆಯನ್ನು ಕೂಡಲೇ ಸ್ಥಗಿತಗೊಳಿಸದಿದ್ದರೆ ವಿಶೇಷ ತನಿಖಾ ತಂಡದ ಅಣಕವಾಗುವುದರಲ್ಲಿ ಅನುಮಾನವಿಲ್ಲ. ರಾಜ್ಯದಲ್ಲಿ ಕಳೆದೊಂದು ತಿಂಗಳಿನಿಂದ ಸದ್ದು ಮಾಡುತ್ತಿರುವ ಮುಸುಕುಧಾರಿ ವ್ಯಕ್ತಿಯ ಬುರುಡೆ ರಹಸ್ಯ ಆರಂಭದಲ್ಲಿ ರೋಚಕವಾಗಿ ಕಂಡರೂ, ಗುಂಡಿ ತೋಡುವ ಕಾರ್ಯಾರಂಭಗೊಂಡು ನಿತ್ಯ ಖಾಲಿ ಕೈಯಲ್ಲಿ ವಾಪಸಾಗಿದ್ದರಿಂದ ಎಸ್‌ಐಟಿಯ ತನಿಖೆಗೇ ಅರ್ಥವಿಲ್ಲದಂತಾಗಿದೆ.

ಜನರ ಪ್ರಶ್ನೆಗಳೇನು?

- ಆತನ ಬಗ್ಗೆ ಈ ಪ್ರಮಾಣದಲ್ಲಿ ರಹಸ್ಯ ಕಾಪಾಡಿಕೊಳ್ಳುವ ಅಗತ್ಯವೇನಿದೆ?
- ಅನಾಮಿಕ ವ್ಯಕ್ತಿಯು ತೋರಿಸಿದ ಜಾಗಗಳಲ್ಲೆಲ್ಲಾ ಅಗೆಯುತ್ತಿರುವುದೇಕೆ?
- ಮುಂದಿನ ದಿನಗಳಲ್ಲಿ ಇನ್ನಷ್ಟು ಮಂದಿ ಬಂದು ದೂರು ನೀಡಿದರೆ ಆಗಲೂ ಅಗೆಯುವರೇ?
- ಯಾರೇ ಆರೋಪ ಮಾಡಿದರೂ ಈ ರೀತಿ ಎಸ್‌ಐಟಿ ರಚಿಸಿ, ಗುಂಡಿ ತೋಡಲು ಸಾಧ್ಯವೇ?
- ಅನಾಮಿಕ ತೋರಿದ ಕಡೆಯೆಲ್ಲಾ ಅಗೆಯಲು ಬಳಕೆಯಾದ ತೆರಿಗೆ ಹಣದ ನಷ್ಟಕ್ಕೆ ಹೊಣೆ ಯಾರು?

ಸಚಿವರೊಬ್ಬರು 10 ಹೆಣಗಳನ್ನು ಹೂತಿಟ್ಟಿದ್ದಾರೆಂದು ಬಂದು ಹೇಳಿಕೆ ನೀಡಿದ ಮಾತ್ರಕ್ಕೆ ವಿಶೇಷ ತನಿಖಾ ತಂಡ ರಚಿಸಿ ಗುದ್ದಲಿ, ಹಾರೆ ಹಿಡಿದು ಗುಂಡಿ ಅಗೆಯಲು ಸಾಧ್ಯವೇ?

ಗೌಪ್ಯತೆ ಕಾಪಾಡಿದ್ದು ತಪ್ಪು: ನೂರಾರು ಶವಗಳನ್ನು ಹೂತಿದ್ದೇನೆ ಎಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ ವ್ಯಕ್ತಿಯ ಗೌಪ್ಯತೆಯನ್ನು ಆರಂಭದಲ್ಲಿ ಸುರಕ್ಷತೆಯ ದೃಷ್ಟಿಯಿಂದ ಕಾಪಾಡಲಾಗಿತ್ತು. ಆದರೆ ನಿಜಕ್ಕೂ ಆ ವ್ಯಕ್ತಿಯ ವಿಶ್ವಾಸಾರ್ಹತೆ ಏನು? ಆತನ ಪೂರ್ವಾಪರವೇನು? ನಿಜಕ್ಕೂ ಮಾನಸಿಕವಾಗಿ ಸ್ಥಿಮಿತವಾಗಿದ್ದಾನೆಯೇ? ಎನ್ನುವ ಬಗ್ಗೆ ಮಾಹಿತಿಯನ್ನು ಬಹಿರಂಗಗೊಳಿಸಬೇಕು. ಇನ್ನೊಂದು ಆರು ತಿಂಗಳು ತನಿಖೆ ನಡೆಸಿದ ಬಳಿಕ ಆತನ ಮಾನಸಿಕ ಸ್ಥಿತಿ ಸರಿಯಿಲ್ಲವೆಂದರೆ ಇಷ್ಟು ದಿನಗಳ ಕಾಲ ಆತನ ಮಾತು ನಂಬಿ ತೋಡಿದ ಗುಂಡಿಗಳು, ಇದಕ್ಕಾಗಿ ಸರಕಾರ ವ್ಯಯಿಸಿದ ಲಕ್ಷಾಂತರ ರುಪಾಯಿ ತೆರಿಗೆ ಹಣ ಈ ಗುಂಡಿಗೆ ಹಾಕಿದಂತಾಗುವುದಿಲ್ಲವೇ? ಹೇಳಿಕೆ ನೀಡಿ ಇಷ್ಟು ದಿನವಾದರೂ ಆತನ ಮಾಹಿತಿಯನ್ನು ಬಹಿರಂಗಪಡಿಸದಿರುವುದೇ ಮೊದಲ ತಪ್ಪು ಎನ್ನುವುದು ಸ್ಪಷ್ಟ.

– ರಂಜಿತ್ ಎಚ್ ಅಶ್ವತ್ಥ್

ಸೋರೆಕಾಯಿಯನ್ನು ಯಾರು ತಿಂದರೆ ಹಿತವಲ್ಲ?

ಆರೋಗ್ಯವೇ ಭಾಗ್ಯ ಎಂಬ ನಾನ್ನುಡಿಯನ್ನು ನೀವು ಕೇಳಿದ್ದೀರಿ ಅಲ್ಲವೇ? ಆರೋಗ್ಯ ಕಾಪಾಡಿಕೊಳ್ಳಲು ನಾವು ಸೇವಿಸುವ ಆಹಾರ ಬಹಳ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ, ಪ್ರತಿನಿತ್ಯ ನಾವು ಸೇವಿಸುವ ಆಹಾರದ ಬಗ್ಗೆ ನಮಗೆ ಅರಿವಿರಬೇಕು. ಕೆಲವು ಆರೋಗ್ಯ ಸಮಸ್ಯೆ ಇರುವವರು ಎಲ್ಲಾ ಬಗೆಯ ಆಹಾರಗಳ ಸೇವನೆ ಮಾಡುವುದು ಒಳ್ಳೆಯದಲ್ಲ. ಅದರಲ್ಲಿಯೂ ಸೋರೆಕಾಯಿ. ಇದು ನಮ್ಮ ಆರೋಗ್ಯಕ್ಕೆ ಅನೇಕ ರೀತಿಯ ಪ್ರಯೋಜನಗಳನ್ನು ನೀಡಬಹುದಾದರೂ ಕೂಡ, ಕೆಲವರು ಅದನ್ನು ತಿನ್ನುವುದನ್ನು ತಪ್ಪಿಸಬೇಕು. ಹಾಗಾದರೆ ಈ ತರಕಾರಿ ಯಾರಿಗೆ ಒಳ್ಳೆಯದಲ್ಲ ಎಂಬುದನ್ನು ತಿಳಿಯೋಣ.

ಕೆಲವರು ಸೋರೆಕಾಯಿಯನ್ನು ಇಷ್ಟಪಟ್ಟು ಸೇವನೆ ಮಾಡುತ್ತಾರೆ. ಇದರಿಂದ ಪಲ್ಯ, ಸಾಂಬಾರ್, ಚಟ್ಟಿ, ಪಾಯಸ, ಸಿಹಿ ತಿಂಡಿಗಳು ಹೀಗೆ ಖಾರವಾದ ಪದಾರ್ಥಗಳಿಂದ ಹಿಡಿದು ಸಿಹಿವರೆಗೆ ಎಲ್ಲಾ ರೀತಿಯ ಭಕ್ಷ್ಯಗಳನ್ನು ತಯಾರಿಸಲಾಗುತ್ತದೆ. ಇನ್ನು ಸೋರೆಕಾಯಿ ನಮ್ಮ ನಾಲಿಗೆಗೆ ರುಚಿ ನೀಡುವುದು ಮಾತ್ರವಲ್ಲ ನಮ್ಮ ಆರೋಗ್ಯಕ್ಕೂ ಕೂಡ ಬಹಳ ಪ್ರಯೋಜನಕಾರಿಯಾಗಿದೆ. ಇದು ಅನೇಕ ರೀತಿಯ ಪೋಷಕಾಂಶಗಳಿಂದ ಸಮೃದ್ಧವಾಗಿದ್ದು ವಿಟಮಿನ್ ಸಿ, ವಿಟಮಿನ್ ಬಿ ಸತು, ಕಬ್ಬಿಣ, ಮೆಗ್ನಿಸಿಯಮ್, ಕ್ಯಾಲ್ಸಿಯಂ ಮತ್ತು ಪೊಟ್ಯಾಸಿಯಮ್‌ನಂತಹ ಸಾಕಷ್ಟು ಪೋಷಕಾಂಶಗಳನ್ನು ಒಳಗೊಂಡಿದೆ. ಹಾಗಾಗಿಯೇ ಇದನ್ನು ಸೇವನೆ ಮಾಡುವುದರಿಂದ ಹಲವಾರು ರೀತಿಯ ಆರೋಗ್ಯ ಪ್ರಯೋಜನಗಳು ಸಿಗುತ್ತವೆ. ಆದರೆ ಇಷ್ಟೆಲ್ಲಾ ಆರೋಗ್ಯ ಪ್ರಯೋಜನಗಳಿರುವ ಈ ತರಕಾರಿಯನ್ನು ಕೆಲವರು ಅಪ್ಪಿತಪ್ಪಿಯೂ ಸೇವನೆ ಮಾಡಬಾರದು ಎಂದು ಆರೋಗ್ಯ ತಜ್ಞರು ಹೇಳುತ್ತಾರೆ. ಹಾಗದರೆ ಇದು ಯಾರಿಗೆ ಒಳ್ಳೆಯದು? ಇದರಿಂದ ಸಿಗುವ ಪ್ರಯೋಜನಗಳೇನು? ಯಾರು ತಿನ್ನಬಾರದು ಎಂಬುದನ್ನು ತಿಳಿದುಕೊಳ್ಳಿ.

ಸೋರೆಕಾಯಿ ಆರೋಗ್ಯ ಪ್ರಯೋಜನ: ಈ ತರಕಾರಿ ಕಡಿಮೆ ಕ್ಯಾಲೋರಿಗಳನ್ನು ಹೊಂದಿದ್ದು, ಇವುಗಳಲ್ಲಿ ಫೈಬರ್ ಅಂಶ ಅಧಿಕವಾಗಿರುತ್ತದೆ. ಆದ್ದರಿಂದ ತೂಕ ಇಳಿಸಿಕೊಳ್ಳಲು ಬಯಸುವವರಿಗೆ ಇದು ಉತ್ತಮ. ಇದನ್ನು ತಿನ್ನುವುದರಿಂದ ಹೊಟ್ಟೆ ತುಂಬಿದ ಅನುಭವವಾಗುತ್ತದೆ. ಇದು ಹೆಚ್ಚು ತಿನ್ನುವ ಬಯಕೆಯನ್ನು ಕೂಡ ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಸೋರೆಕಾಯಿ ಬಿಸಿ ವಾತಾವರಣದಲ್ಲಿ ದೇಹವನ್ನು ತಂಪಾಗಿಡಲು ಸಹಾಯ ಮಾಡುತ್ತದೆ. ಇನ್ನು ಇವುಗಳಲ್ಲಿರುವ ಕಡಿಮೆ ಪಿಷ್ಟ ಅಂಶವು ಮಧುಮೇಹಿಗಳಿಗೆ ಒಳ್ಳೆಯದು. ಅವು ನೈಸರ್ಗಿಕ ಕ್ಲೀನರ್ ಆಗಿ ಕಾರ್ಯನಿರ್ವಹಿಸುತ್ತವೆ ಮತ್ತು ದೇಹದಿಂದ ವಿಷವನ್ನು ತೆಗೆದುಹಾಕುತ್ತವೆ.

ಸೋರೆಕಾಯಿ ಸೇವನೆ ಯಾರಿಗೆ ಒಳ್ಳೆಯದಲ್ಲ ಎಂಬುವುದನ್ನು ನೋಡೋಣ

ಜೀರ್ಣಕಾರಿ ಸಮಸ್ಯೆ ಇರುವವರಿಗೆ:– ಸೂಕ್ಷ್ಮ ಜೀರ್ಣಾಂಗ ವ್ಯವಸ್ಥೆ ಇರುವವರು ಅಥವಾ ಈಗಾಗಲೇ ಜೀರ್ಣಕಾರಿ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಸೋರೆಕಾಯಿ ತಿನ್ನಬಾರದು ಎಂದು ತಜ್ಞರು ಹೇಳುತ್ತಾರೆ. ಇದರಲ್ಲಿ ಫೈಬರ್ ಅಂಶ ಚೆನ್ನಾಗಿದ್ದರೂ ಕೂಡ ಇದು ಜೀರ್ಣವಾಗುವುದಿಲ್ಲ. ಆದ್ದರಿಂದ, ಅನಿಲ, ಅಜೀರ್ಣ ಮತ್ತು ಹೊಟ್ಟೆ ಉಬ್ಬುವಿಕೆಯಂತಹ ಸಮಸ್ಯೆಗಳಿರುವವರು ಈ ತರಕಾರಿ ಸೇವನೆ ಮಾಡುವುದನ್ನು ತಪ್ಪಿಸುವುದು ಉತ್ತಮ. ಇಲ್ಲದಿದ್ದರೆ ನಿಮ್ಮ ಸಮಸ್ಯೆಗಳು ಉಲ್ಬಣಬಾಗಿ ಇನ್ನಷ್ಟು ಹದಗೆಡಬಹುದು.

ಅಧಿಕ ರಕ್ತದೊತ್ತಡ ಹೊಂದಿರುವ ರೋಗಿಗಳು:– ಸೋರೆಕಾಯಿ ತಿನ್ನುವುದರಿಂದ ರಕ್ತದೊತ್ತಡ ನಿಯಂತ್ರಣದಲ್ಲಿರುತ್ತದೆ. ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವವರಿಗೆ ಇದು ಒಳ್ಳೆಯದು. ಆದರೆ ಈಗಾಗಲೇ ಕಡಿಮೆ ರಕ್ತದೊತ್ತಡದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಈ ತರಕಾರಿ ಸೇವನೆ ಮಾಡುವುದು ಸೂಕ್ತವಲ್ಲ ಎಂದು ತಜ್ಞರು ಹೇಳುತ್ತಾರೆ. ಆದ್ದರಿಂದ, ಕಡಿಮೆ ರಕ್ತದೊತ್ತಡ ಸಮಸ್ಯೆ ಇರುವವರು ಸೇವನೆ ಮಾಡಬಾರದು ಅಥವಾ ಸೀಮಿತ ಪ್ರಮಾಣದಲ್ಲಿ ಸೇವಿಸಬೇಕು.

ಮೂತ್ರಪಿಂಡದಲ್ಲಿ ಕಲ್ಲು ಇರುವವರು:– ಸೋರೆಕಾಯಿಯಲ್ಲಿ ಆಕ್ಸಲೇಟ್‌ಗಳು ಇರುತ್ತವೆ. ಇವು ಮೂತ್ರಪಿಂಡಗಳಲ್ಲಿ ಕಲ್ಲುಗಳ ರಚನೆಗೆ ಕಾರಣವಾಗಬಹುದು. ಆದ್ದರಿಂದ, ಈಗಾಗಲೇ ಮೂತ್ರಪಿಂಡದಲ್ಲಿ ಕಲ್ಲಿನ ಸಮಸ್ಯೆಯಿಂದ ಬಳಲುತ್ತಿರುವವರು ಈ ತರಕಾರಿಯ ಸೇವನೆ ಮಾಡುವುದನ್ನು ತಪ್ಪಿಸುವುದು ಉತ್ತಮ. ನೀವು ಇದನ್ನು ತಿನ್ನಲೇಬೇಕೆಂದಾಗ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಸಲಹೆ ಪಡೆದು ಆ ಬಳಿಕ ಸೇವನೆ ಮಾಡುವುದು ಬಹಳ ಉತ್ತಮ.

ದುರ್ಬಲ ರೋಗನಿರೋಧಕ ಶಕ್ತಿ:– ಎಚ್‌ಐವಿ/ಏಡ್ಸ್ ರೋಗಿಗಳು ಅಥವಾ ಕೀಮೋಥೆರಪಿಗೆ ಒಳಗಾಗುವಂತಹ ಅಥವಾ ದುರ್ಬಲಗೊಂಡ ರೋಗನಿರೋಧಕ ಶಕ್ತಿ ಹೊಂದಿರುವವರು ಜಾಗರೂಕರಾಗಿರಬೇಕು. ಬ್ಯಾಕ್ಟೀರಿಯಾ ಅಥವಾ ಶಿಲೀಂಧ್ರಗಳ ಸೋಂಕಿನ ಅಪಾಯವಿದೆ. ವಿಶೇಷವಾಗಿ, ಆಹಾರವನ್ನು ಸರಿಯಾಗಿ ಬೇಯಿಸದಿದ್ದರೆ ಬಹಳ ಅಪಾಯಕಾರಿ.

ಗರ್ಭಾವಸ್ಥೆಯಲ್ಲಿರುವಾಗ ಸೋರೆಕಾಯಿ ರಸವನ್ನು ಸೇವಿಸಬಾರದು ಅಥವಾ ಹಸಿಯಾಗಿ ತಿನ್ನಬಾರದು. ಏಕೆಂದರೆ ಸೋರೆಕಾಯಿಯಲ್ಲಿ ವಿಷಕಾರಿ ಅಂಶಗಳು ಇರಬಹುದು, ಇದು ಗರ್ಭಿಣಿಯರ ಮೇಲೆ ಪರಿಣಾಮ ಬೀರಬಹುದು.

★ ಅಲರ್ಜಿ ಇರುವವರು ಸೋರೆಕಾಯಿ ತಿನ್ನುವುದನ್ನು ತಪ್ಪಿಸುವುದು ಉತ್ತಮ. ಇದನ್ನು ಸೇವಿಸುವುದರಿಂದ ಚರ್ಮದ ಕಿರಿಕಿರಿ. ದದ್ದುಗಳು, ಊತ ಮತ್ತು ಉಸಿರಾಟದ ತೊಂದರೆ ಮುಂತಾದ ಸಮಸ್ಯೆಗಳು ಉಂಟಾಗಬಹುದು.

★ ಸೋರೆಕಾಯಿ ಕಹಿಯಾಗಿದ್ದರೆ, ಅದನ್ನು ಸೇವಿಸದಿರುವುದು ಉತ್ತಮ. ಏಕೆಂದರೆ ಅದರಲ್ಲಿ ವಿಷಕಾರಿ ಅಂಶಗಳು ಇರಬಹುದು, ಇದು ವಾಂತಿ, ತೀವ್ರ ಹೊಟ್ಟೆ ನೋವು, ಅತಿಸಾರ ಮತ್ತು ನಿರ್ಜಲೀಕರಣದಂತಹ ಸಮಸ್ಯೆಗಳಿಗೆ ಕಾರಣವಾಗಬಹುದು.

★ ಮಧುಮೇಹ ಮತ್ತು ರಕ್ತದೊತ್ತಡಕ್ಕೆ ಔಷಧಿಗಳನ್ನು ತೆಗೆದುಕೊಳ್ಳುವವರು ಹೆಚ್ಚು ಸೋರೆಕಾಯಿ ಸೇವಿಸುವುದನ್ನು ತಪ್ಪಿಸಬೇಕು. ಏಕೆಂದರೆ ಅದು ಔಷಧಿಗಳೊಂದಿಗೆ ಬೇರೆಯಬಹುದು.

ಯಾವುದೇ ಆಹಾರವಾಗಲಿ ಅದನ್ನು ಮಿತವಾಗಿ ಸೇವಿಸಬೇಕು. ಸೋರೆಕಾಯಿಯನ್ನು ಕೂಡ ಮಿತವಾಗಿ ಸೇವಿಸುವುದು ಆರೋಗ್ಯಕ್ಕೆ ಪ್ರಯೋಜನಕಾರಿ. ಆದರೆ ಅದನ್ನೇ ಅತಿಯಾಗಿ ಸೇವನೆ ಮಾಡುವುದರಿಂದ ಕೆಲವು ಅಡ್ಡಪರಿಣಾಮಗಳು ಉಂಟಾಗಬಹುದು.

13-8-2025 ದಿನ ಭವಿಷ್ಯ

ಮೇಷ: ವಿಧಿಯನ್ನು ಆಧರಿಸದಿರಿ ಮತ್ತು ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ, ನಿಮ್ಮ ತೂಕವನ್ನು ನಿಯಂತ್ರಿಸಲು ಮತ್ತು ನಿಮ್ಮ ಆರೋಗ್ಯವನ್ನು ಪುನಃ ಪಡೆಯಲು ವ್ಯಾಯಾಮ ಮಾಡಲು ಇದು ಒಳ್ಳೆಯ ಸಮಯ.

ವೃಷಭ: ಯಶಸ್ಸು ಹತ್ತಿರವಿರುವಂತೆ ತೋರಿದರೂ ಸಹ ಶಕ್ತಿ ಕುಂಠಿತವಾಗುತ್ತದೆ. ನಿಮ್ಮ ತಾಯಿಯ ಬದಿಯಿಂದ ಇಂದು ಹಣ ಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ. ನಿಮ್ಮ ಮಾಮ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು. ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ. ಅವರ ಆಸಕ್ತಿ ಕಾಯ್ದುಕೊಳ್ಳಲು ಪ್ರೀತಿಯ ಅಸ್ತ್ರ ಬಳಸಿ.

ಮಿಥುನ: ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ನಿಮ್ಮ ತಾಳ್ಮೆ ಕಳೆದು

ಮಣಚನಹಳ್ಳಿಯಲ್ಲಿ ಶಾಲೆಯ ನಡಿಗೆ ಹಳ್ಳಿಯ ಕಡೆಗೆ

• ಪ್ರಜೋದಯ ವರದಿ

ಹಾಸನ: ಟೈಮ್ಸ್ ಅಂತರರಾಷ್ಟ್ರೀಯ ಶಾಲೆ, ರೋಟರಿ ಕ್ಲಬ್ ಆಫ್ ಹಾಸನ ರಾಯಲ್, ಟೈಮ್ಸ್ ಇಂಟರ್ಯಾಕ್ಟ್ ಕ್ಲಬ್ ವತಿಯಿಂದ ಮಂಗಳವಾರ ನಗರ ಸಮೀಪದ ಮಣಚನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಶಾಲೆಯ ನಡಿಗೆ ಹಳ್ಳಿಯ ಕಡೆಗೆ ಕಾರ್ಯಕ್ರಮಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು.

500ಕ್ಕೂ ಅಧಿಕ ಮಕ್ಕಳು ಭತ್ತದ ನಾಟಿಗೆ ಸಿದ್ಧಪಡಿಸಿದ್ದ ಗದ್ದೆಯಲ್ಲಿ ಸಸಿಗಳನ್ನು ಸಾಲಾಗಿ ನೆಟ್ಟು ಗ್ರಾಮೀಣ ಬದುಕಿನ ಅನುಭವ ಪಡೆದುಕೊಂಡರು. ಜೊತೆಗಿದ್ದ ಗ್ರಾಮದ ಹಿರಿಯರು ಮಕ್ಕಳಿಗೆ ಸಸಿಗಳನ್ನು ಹೇಗೆ ನಾಟಿ ಮಾಡಬೇಕು ಎಂಬುದನ್ನು ತಿಳಿಸಿಕೊಡುತ್ತಿದ್ದರೆ, ಒಂದೆಡೆ ಶಾಲಾ ಶಿಕ್ಷಕರು ತಮ್ಮ ಶಾಲೆಯ ಮಕ್ಕಳ ಕೈಚಳಕವನ್ನು ಕಂಡು ಆಶ್ಚರ್ಯ ಪಡುತ್ತಿದ್ದರು. ಮಕ್ಕಳು ಧರಿಸಿದ್ದ ಶಾಲಾ ಸಮಸ್ತ್ರದಲ್ಲೇ ಕೆಸರು ಗದ್ದೆಗೆ ಇಳಿದು ಶಾಲಾ ಆಡಳಿತ ಮಂಡಳಿ ಆಯೋಜಿಸಿದ್ದ ವಾಲಿಬಾಲ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಗದ್ದೆಯಲ್ಲಿ ಬಿದ್ದು ಎದ್ದು ಖುಷಿ ಪಟ್ಟರು. ವಿದ್ಯಾರ್ಥಿನಿಯರು ಹಾಗು ಶಿಕ್ಷಕರು ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಭಾಗವಹಿಸಿ ಕೆಸರಿನಲ್ಲಿ ಮಿಂದೆದ್ದರು.

ವಿಶೇಷ ಬ್ಯಾಂಡ್‌ಸೆಟ್ ವಾದ್ಯಗಳ ಶಬ್ದಕ್ಕೆ ಶಾಲಾ ಮಕ್ಕಳು ಗದ್ದೆಯಲ್ಲಿಯೇ ಕುಣಿದು ಕುಪ್ಪಳಿಸಿದರು. ಪಟ್ಟಣದಲ್ಲಿಯೇ ಹುಟ್ಟಿ ಬೆಳೆದ ಮಕ್ಕಳಿಗೆ ಗದ್ದೆಯ ಗಂಧ ಗಾಳಿಯೇ ತಿಳಿಯದೆ ಇದ್ದವರಂತು ಈ ವಾತಾವರಣ ಕಂಡು ಸಂತಸರಾದರು.

ರೋಟರಿ ಕ್ಲಬ್‌ನ ಜೋನ್ 9ರ ಸಹಾಯಕ ಗವರ್ನರ್ ರೋ. ಮಂಜುನಾಥ್, ಹೊಂಬಾಳೆ ಇಟ್ಟ ಭತ್ತದ ರಾಶಿಗೆ ಹಾಗು ರಾಸುಗಳಿಗೆ ಪೂಜೆ ಸಲ್ಲಿಸುವ ಮೂಲಕ ಭತ್ತದ ನಾಟಿಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ನಗರದಲ್ಲಿ ಹುಟ್ಟಿ ಬೆಳೆದ ಮಕ್ಕಳಿಗೆ ಕೃಷಿ ಜೀವನ ತಿಳಿದಿರುವುದಿಲ್ಲ. ಭತ್ತ ಯಾವ ಮರದಲ್ಲಿ ಬಿಡುತ್ತದೆ ಎಂದು ಮಕ್ಕಳು ಕೇಳುವ ಸ್ಥಿತಿ ಬಂದಿದೆ. ಈ ನಿಟ್ಟಿನಲ್ಲಿ ಎಲ್ಲರೂ ತಮ್ಮನ್ನು ತಾವು ಪ್ರಶ್ನೆ ಮಾಡಿಕೊಳ್ಳಬೇಕಾದ ಸ್ಥಿತಿಗೆ ಬಂದಿದ್ದೇವೆ. ಮಕ್ಕಳನ್ನು ಇನ್ನಾದರು ಮಣ್ಣಿನೊಂದಿಗೆ ಬೆರೆತು ಬದುಕುವುದನ್ನು ಕಲಿಸಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು.

ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಅಧ್ಯಕ್ಷ ಬಿ.ಕೆ.ಗಂಗಾಧರ್ ಅವರು ಮಾತನಾಡಿ, ಇಂದಿನ ಬಹುತೇಕ ಮಕ್ಕಳು ರೈತರ ದಿನನಿತ್ಯದ ಕಷ್ಟಗಳನ್ನು ನೋಡಿಲ್ಲ, ಒಂದು ತುತ್ತು ಅನ್ನದ ಬೆಲೆ ತಿಳಿಯಬೇಕಾದರೆ ಅದರ ಹಿಂದೆ ರೈತ ಏನೆಲ್ಲಾ ಕಷ್ಟಪಡುತ್ತಾನೆ ಎಂಬುದು ಮಕ್ಕಳಿಗೆ ತಿಳಿಯಬೇಕು ಎಂಬ ಕಾರಣಕ್ಕೆ ಗದ್ದೆ ನಾಟಿಗೆ ಕರೆತರಲಾಗುತ್ತದೆ ಎಂದರು.

ರೋಟರಿ ಕ್ಲಬ್ ಜೋನ್ 9ರ ವಲಯ ಸೇನಾನಿ ಮಮತ ಪಾಟೀಲ್ ಮಾತನಾಡಿದರು. ರೋಟರಿ ಇಂಟರ್ಯಾಕ್ಟ್ ಜಿಲ್ಲಾ ಸಮಿತಿಯ ವಲಯ ಸಂಚಾಲಕ ಶಿವಕುಮಾರ್, ಟೈಮ್ಸ್ ಶಾಲೆಯ ಮುಖ್ಯ ಶಿಕ್ಷಕಿ ಬ್ಲೆಸ್ಸಿ ಶಾಮ್, ಕ್ಲಬ್ ಆಫ್ ಹಾಸನ ರಾಯಲ್ ಕಾರ್ಯದರ್ಶಿ ಪಿ. ರವಿಕುಮಾರ್, ಖಜಾಂಚಿ ಹೆಚ್.ಕೆ.ದಿಲೀಪ್ ಕುಮಾರ್, ಸದಸ್ಯರಾದ ಡಾ.ವಿಕ್ರಂ, ಎಸ್. ಯೋಗೇಶ್, ಯು.ವಿ.ಸಚಿನ್ ಇತರರಿದ್ದರು.

ರೈತರಿಗೆ ಅಣಬೆ ಬೆಳೆಯಲು ಪ್ರಾಯೋಗಿಕ ಮಾರ್ಗದರ್ಶನ

• ಪ್ರಜೋದಯ ವರದಿ

ಹಾಸನ: ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿ ಗಳು ತಾಲ್ಲೂಕಿನ ಹಂಪನಹಳ್ಳಿಯ ರೈತರಿಗೆ ಅಣಬೆ ಬೆಳೆಯ ಕುರಿತು ಪ್ರಾಯೋಗಿಕ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಹೆಚ್.ಗುರು ಮೂರ್ತಿ ಅವರು ಮಾತನಾಡಿ, ಅಣಬೆ ಶಿಲೀಂಧ್ರ ವರ್ಗಕ್ಕೆ ಸೇರಿದ ಒಂದು ಆರೋಗ್ಯಕರ ಆಹಾರವಾಗಿದ್ದು, ಹಲವು ವಿಧಗಳಿವೆ. ತಿನ್ನಬಹುದಾದ ಬಟನ್ ಅಣಬೆ, ಸಿಂಪಿ ಅಣಬೆ ಮುಂತಾದವುಗಳ ಜೊತೆಗೆ ವಿಷಪೂರಿತ ಜಾತಿಗಳೂ ಇರುವುದರಿಂದ ಅವನ್ನು ಗುರುತಿ ಸುವುದು ಮುಖ್ಯವೆಂದು ತಿಳಿಸಿದರು.

ಅಣಬೆ ಬೆಳೆಯುವ ವಿಧಾನವನ್ನು ವಿವರಿಸಿದ ಅವರು, ಭತ್ತದ ಹುಲ್ಲು ಅಣಬೆ ಉತ್ಪಾದನೆಗೆ ಅವಶ್ಯಕ. 5 ಸೆಂ. ಮೀ. ಉದ್ದಕ್ಕೆ ಕತ್ತರಿಸಿದ ಹುಲ್ಲನ್ನು ನೀರಿನಲ್ಲಿ ಕುದಿಸಿ, ನೀರಿನಿಂದ ತೆಗೆದು ಒಣಗಿಸಿದ ಬಳಿಕ 1 ಕೆ.ಜಿ. ಸಾಮರ್ಥ್ಯದ ಪಾಲಿಥೀನ್ ಚೀಲಗಳಲ್ಲಿ ತುಂಬಬೇಕು. ಹಂತ ಹಂತ ವಾಗಿ 500 ಗ್ರಾಂ ಅಣಬೆ ಬೀಜವನ್ನು ಸಮನಾಗಿ ಸೇರಿಸಬೇಕು. ಅಣಬೆ ಬೀಜವನ್ನು ಬಿಳಿ ಜೋಳ ಬೇಯಿಸಿ, ಅದಕ್ಕೆ ಜಿಪ್ಸಮ್ ಹಾಗು ಸುಣ್ಣದ ಪುಡಿ ಸೇರಿಸಿ ತಯಾರಿಸಲಾಗುತ್ತದೆ. ಚೀಲದ ಬಾಯನ್ನು ಕಟ್ಟಿ ತಂಪಾದ ಸ್ಥಳದಲ್ಲಿ 30 ದಿನಗಳ ಕಾಲ ಇಟ್ಟು, ಬೆಳವಣಿಗೆ ನಡೆಯು ವಂತೆ ನೋಡಿ ಕೊಳ್ಳಬೇಕು. ಈ ಅವಧಿಯಲ್ಲಿ ನೀರನ್ನು ಚಿಮುಕಿಸುವ ಮೂಲಕ ತೇವಾಂಶವನ್ನು ಕಾಪಾಡಬೇಕು ಎಂದು ತಿಳಿಸಿದರು.

ಆಲೂಗಡ್ಡೆ ಬೇಸಾಯದ ಬಗ್ಗೆ ಮಾಹಿತಿ

ಕಾರ್ಯಾಗಾರದಲ್ಲಿ ತೋಟಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಕಿರಣ್ ಸಾಗರ್ ಅವರು, ಆಲೂಗಡ್ಡೆ ಬೆಳೆಯ ಲಾಭದಾಯಕತೆ ಮತ್ತು ಉತ್ತಮ ಉತ್ಪಾದನೆಗಾಗಿ ಅನುಸರಿಸಬೇಕಾದ ತಂತ್ರಜ್ಞಾನಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡಿದರು.

ಆಲೂಗಡ್ಡೆ ಬೆಳೆಸಲು ಸೂಕ್ತ ಹವಾಮಾನ ಮತ್ತು ಮಣ್ಣಿನ ಆಯ್ಕೆ, ಭೂಮಿ ಸಿದ್ಧತೆ, ಬಿತ್ತನೆ ವಿಧಾನ, ನೀರಾವರಿ ವ್ಯವಸ್ಥೆ, ಕೊಟ್ಟಿಗೆ ಗೊಬ್ಬರದೊಂದಿಗೆ ಟ್ರೈಕೋಡರ್ಮಾ ಮಿಶ್ರಣ ಬಳಕೆ, ರಸಗೊಬ್ಬರದ ಸರಿಯಾದ ಪ್ರಮಾಣ ಹಾಗು ಕುಫ್ರಿ ಹಿಮಾಲಿನಿ, ಕುಫ್ರಿ ಸಿಂಧೂರಿ ತಳಿಗಳ ಗುಣಲಕ್ಷಣಗಳ ಕುರಿತು ಮಾಹಿತಿ ನೀಡಲಾಯಿತು. ಜೊತೆಗೆ ಕಳೆ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗ ನಿರ್ವಹಣಾ ಕ್ರಮಗಳು, ಕೊಯ್ಲು ಹಾಗು ಸಂಗ್ರಹಣೆ ವಿಧಾನಗಳನ್ನೂ ವಿವರಿಸಲಾಯಿತು.

ಪ್ರತ್ಯೇಕ ಅಪಘಾತದಲ್ಲಿ ಮೂವರ ಸಾವು

ಹಾಸನ: ತಾಲ್ಲೂಕಿನ ಶಾಂತಿಗ್ರಾಮ ಹಾಗು ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹಿರೀಸಾವೆ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಮೂವರು ಮೃತಪಟ್ಟು ಮೂವರು ಗಾಯಗೊಂಡಿರುವ ಘಟನೆ ನಡೆದಿದೆ.

ರಾಷ್ಟ್ರೀಯ ಹೆದ್ದಾರಿ 75ರ ಶಾಂತಿಗ್ರಾಮ ಎಪಿಎಂಸಿ ಸಮೀಪ ನಿಲ್ಲಿಸಿದ್ದ ಕ್ಯಾಂಟರ್‌ಗೆ ಬುಲೆರೋ ವಾಹನ ಡಿಕ್ಕಿಯಾಗಿ ವ್ಯಕ್ತಿ ಮೃತಪಟ್ಟಿದ್ದಾರೆ. ತಮಿಳುನಾಡಿನ ಸುಲಕುಂಟೇಪುರಂ ಗ್ರಾಮದ ಲೋಕೇಶ (36) ಮೃತರು. ನಾಲ್ವರು ಸ್ನೇಹಿತರು ಬೆಂಗಳೂರಿನಲ್ಲಿ ನೀಲಗಿರಿ ಬುಡ ಕೀಳುವ ಮತ್ತು ಲೋಡ್ ಮಾಡುವ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿಕೊಂಡಿದ್ದರು. ಆ. 11 ರಂದು ಧರ್ಮಸ್ಥಳಕ್ಕೆ ಬುಲೆರೋದಲ್ಲಿ ತೆರಳುತ್ತಿದ್ದರು. ಮಧ್ಯ ರಾತ್ರಿ 1 ಗಂಟೆ ಸಮಯದಲ್ಲಿ ಬರುತ್ತಿ ದ್ದಾಗ ರಸ್ತೆ ಬದಿ ನಿಲ್ಲಿಸಿದ್ದ ಕ್ಯಾಂಟರ್‌ಗೆ ವಾಹನ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ವಾಹನ ಸಂಪೂರ್ಣ ಜಖಂಗೊಂಡಿದೆ. ಚಾಲಕ ಮಂಜುನಾಥ್, ರಾಜಪ್ಪ, ಅರ್ಜುನ್ ಎಂಬುವ ವರಿಗೆ ಗಂಭೀರ ಏಟಾಗಿದೆ. ಚಾಲಕನ ಪಕ್ಕದಲ್ಲೇ ಕುಳಿತಿದ್ದ ಲೋಕೇಶ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದಚಾರಿ ಸಾವು: ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಮಾದಿಹಳ್ಳಿ ಕಾಲೋನಿ ಪೆಟ್ರೋಲ್ ಬಂಕ್ ಸಮೀಪ ನಡೆದದೆ.

ದಂಡಿಗನಹಳ್ಳಿ ಗ್ರಾಮದ ಬೋರಯ್ಯ (63) ಮೃತರು. ಸೋಮವಾರ ರಸ್ತೆಯ ಪಾದಚಾರಿ ಮಾರ್ಗದ ಮೇಲೆ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದಾಗ ಬೆಂಗಳೂರು ಕಡೆ ಯಿಂದ ವೇಗವಾಗಿ ಬಂದ ಅಶೋಕ ಲೈಲ್ಯಾಂಡ್ ವಾಹನ ಡಿಕ್ಕಿಯಾಗಿದೆ. ತಲೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆ ವೃದ್ಧ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಸ್ಕೂಟಿಯಿಂದ ಬಿದ್ದು ಸವಾರ ಮೃತಪಟ್ಟ ಘಟನೆ ಚನ್ನರಾಯ ಪಟ್ಟಣ ತಾಲ್ಲೂಕು ಯಾಚನಘಟ್ಟ-ಕಬ್ಬಳಿ ರಸ್ತೆಯ ದುಗ್ಗೇನಹಳ್ಳಿ ಗೇಟ್‌ಸಮೀಪ ನಡೆದಿದೆ.

ಎಸ್.ಹೊಸಹಳ್ಳಿ ಗ್ರಾಮದ ಮಂಜುನಾಥ್ (61) ಮೃತರು. ತಮ್ಮ ಸ್ಕೂಟರ್ ನಲ್ಲಿ ಬರುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಿ ನಂತರ ಹಿಮ್ಸ್‌ಗೆ ದಾಖಲಿ ಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸೋಮವಾರ ಮೃತಪಟ್ಟಿದ್ದಾರೆ.

ಗುಂಡಿಬಿದ್ದ ರಸ್ತೆಯಲ್ಲಿ ಸಂಚಾರ ಸಂಕಷ್ಟ: ಎಚ್ಚರ ತಪ್ಪಿದರೆ ಆಪತ್ತು

• ಪ್ರಜೋದಯ ವರದಿ

ಆರೇಹಳ್ಳಿ: ರಾಷ್ಟ್ರ ಮತ್ತು ರಾಜ್ಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ಲಿಂಗಾಪುರ ಗ್ರಾಮ ವ್ಯಾಪ್ತಿಯ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳು ನಿರ್ಮಾಣಗೊಂಡು ವಾಹನಗಳ ಸಂಚಾರಕ್ಕೆ ತೀವ್ರ ಸಮಸ್ಯೆ ಉಂಟಾಗಿದೆ.

ಬೇಲೂರು ಪಟ್ಟಣದಿಂದ ಆರೇಹಳ್ಳಿ ಮಾರ್ಗವಾಗಿ ಸಕಲೇಶಪುರಕ್ಕೆ ತೆರಳುವ ರಸ್ತೆಯ ಹಲವೆಡೆ ಸಣ್ಣಪುಟ್ಟ ಗುಂಡಿಗಳು ಸಾಮಾನ್ಯವಾಗಿದ್ದರೂ, ನೇರವಾದ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಗುಂಡಿಗಳಿಂದ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸುವ ಮೂಲಕ ಅಪಾಯವನ್ನು ತಪ್ಪಿಸುತ್ತಿದ್ದಾರೆ. ಆದರೆ, ಲಿಂಗಾಪುರ ಗ್ರಾಮದ ಸಮೀಪದ ಸ್ಮಶಾನದ ಬಳಿ ಇರುವ ತಿರುವಿನಲ್ಲಿ ದೊಡ್ಡ ಗುಂಡಿಗಳಿದ್ದು, ವಾಹನ ಸವಾರರು ಒಂದು ಕ್ಷಣ ಎಚ್ಚರ ತಪ್ಪಿದರೂ ದೊಡ್ಡ ಅಪಘಾತಕ್ಕೆ ಕಾರಣವಾಗಬಹುದೆಂದು ಸ್ಥಳೀಯರು ಆರೋಪಿಸಿದ್ದಾರೆ.

ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ಕೆಲ ತಿಂಗಳ ಹಿಂದೆ ಜೆಜೆಎಂ ಕಾಮಗಾರಿಯ ಪೈಪ್‌ಲೈನ್ ಆಳ ವಡಿಸುವ ಸಂಬಂಧ ರಸ್ತೆಯನ್ನು ಅಗೆದು, ಅದನ್ನು ಸರಿಯಾಗಿ ದುರಸ್ತಿ ಮಾಡದ ಕಾರಣ ದುಸ್ಥಿತಿ ನಿರ್ಮಾ ಣವಾಗಿದೆ. ಇದರಿಂದ ದಿನನಿತ್ಯ ಸಂಚರಿಸುವ ನೂರಾರು ವಾಹನ ಸವಾರರು ಸಂಬಂಧಪಟ್ಟ ಇಲಾಖೆಯ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ರಾಜ್ಯ ಹೆದ್ದಾರಿ-27 ಹಾಗು ರಾಷ್ಟ್ರೀಯ ಹೆದ್ದಾರಿ-73 ಮತ್ತು 75ಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ಮಾರ್ಗವಾಗಿರುವುದರಿಂದ ನೂರಾರು ಅಂತರ್ ರಾಜ್ಯ ವಾಹನಗಳು ಈ ರಸ್ತೆ ಬಳ ಸುತ್ತಿವೆ. ದುಸ್ಥಿತಿಯ ರಸ್ತೆಯಿಂದ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿರುವು ದಲ್ಲದೆ, ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿ ದಿನನಿತ್ಯ ಸಂಚರಿಸುವ ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಹೈರಾಣಾಗುತ್ತಿದ್ದಾರೆ.

ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತಕ್ಷಣವೇ ಗುಂಡಿ ಬಿದ್ದ ಜಾಗವನ್ನು ದುರಸ್ತಿ ಮಾಡಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ. ಇಲ್ಲದಿದ್ದಲ್ಲಿ, ರಸ್ತೆಯಲ್ಲಿ ಹಾನಿಯಾಗಿದೆ ಎಂಬ ಎಚ್ಚರಿಕಾ ಫಲಕಗಳನ್ನು ಅಳವಡಿಸುವ ಮೂಲಕ ವಾಹನ ಸವಾರರಿಗೆ ಮುನ್ನೆಚ್ಚರಿಕೆ ನೀಡ ಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ತನಿಖೆಗೆ ಚುನಾವಣಾ ಆಯೋಗಕ್ಕೆ ಪತ್ರ

ನವದೆಹಲಿ: ಕರ್ನಾಟಕ ವಿಧಾನ ಸಭೆಯ 2018ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಬಾದಾಮಿ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಗೆಲುವನ್ನು ಖಚಿತ ಪಡಿಸಿಕೊಳ್ಳಲು 3,000 ಮತಗಳನ್ನು ಖರೀದಿಸಿದ್ದರು ಎಂದು ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ನೀಡಿರುವ ಹೇಳಿಕೆ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಬಿಜೆಪಿಯ ರಾಜ್ಯ ಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಭಾರತೀಯ ಚುನಾವಣಾ ಆಯೋಗಕ್ಕೆ ಮಂಗಳವಾರ ಒತ್ತಾಯಿಸಿದ್ದಾರೆ.

ಆ.16ರಂದು ನುಲಿಯಚಂದಯ್ಯ ಜಯಂತಿ

• ಪ್ರಜೋದಯ ವರದಿ

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆ.16ರ ಬೆಳಿಗ್ಗೆ 11 ಗಂಟೆಗೆ ಶ್ರೀ ನುಲಿಯಚಂದಯ್ಯ ಜಯಂತಿಯನ್ನು ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು, ಕರ್ನಾಟಕರಾಜ್ಯ ಗೃಹ ಮಂಡಳಿ ಅಧ್ಯಕ್ಷರಾದ ಕೆ.ಎಂ. ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ.ರೇವಣ್ಣ, ಡಾ. ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ಕೆ. ವಿವೇಕಾನಂದ, ಡಾ॥ಸೂರಜ್ ರೇವಣ್ಣ ಹಾಗೂ ಮಹಾಪೌರ ಎಂ. ಚಂದ್ರೇಗೌಡ ಭಾಗವಹಿಸಲಿದ್ದಾರೆ.

ಕೆ.ಆಲದಹಳ್ಳಿಯಲ್ಲಿ ಜೈವಿಕ ಗೊಬ್ಬರ ಬಳಕೆ ಕಾರ್ಯಾಗಾರ

• ಪ್ರಜೋದಯ ವರದಿ

ಹಾಸನ: ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ತಾಲ್ಲೂಕಿನ ಕೆ.ಆಲದಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ ಪ್ರಯುಕ್ತ ಜೈವಿಕ ಗೊಬ್ಬರ ಬಳಕೆ ಕುರಿತು ಅರಿವು ಕಾರ್ಯಕ್ರಮ ಏರ್ಪಡಿಸಿದ್ದರು.

ಕೃಷಿ ಮಹಾವಿದ್ಯಾಲಯದ ಕೃಷಿ ಸೂಕ್ಷ್ಮಜೀವಶಾಸ್ತ್ರವಿಭಾಗ ಸಹಾಯಕ ಪ್ರಾಧ್ಯಾಪಕ ಡಾ. ಹೆಚ್.ಗುರು ಮೂರ್ತಿ ಅವರು, ಜೈವಿಕ ಗೊಬ್ಬರದ ಪ್ರಾಮುಖ್ಯತೆ, ಇಳುವರಿ ಹೆಚ್ಚಿಸುವಲ್ಲಿ ವಹಿಸುವ ಪಾತ್ರ, ಗೊಬ್ಬರದ ವಿಧ, ಬಳಸುವ ವಿಧಾನ, ಬಳಸಬೇಕಾದ ಪ್ರಮಾಣ, ಬಿತ್ತನೆಗೆ ಮೊದಲು ಹಾಗು ನಂತರದ ದಿನಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಿದರು. ಶಿಬಿರಾರ್ಥಿಗಳಾದ ಮೇಘನಾ ಹಾಗು ಶೈವಿ ಸಮಾರಂಭ ನಿರ್ವಹಿಸಿದರು. ಗ್ರಾಮಸ್ಥರು ಇತರರು ಹಾಜರಿದ್ದರು.

ಐಸಿಸಿ ತಿಂಗಳ ಆಟಗಾರ ಪ್ರಶಸ್ತಿ ಗೆದ್ದ ಗಿಲ್

• ಪ್ರಜೋದಯ ವರದಿ

ದುಬೈ: ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಶುಭಮನ್ ಗಿಲ್, ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) 2025 ಜುಲೈ ತಿಂಗಳ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆ ಮೂಲಕ ಪುರುಷರ ಕ್ರಿಕೆಟ್‌ನಲ್ಲಿ ದಾಖಲೆಯ ನಾಲ್ಕನೇ ಸಲ ಐಸಿಸಿ ತಿಂಗಳ ಪ್ರಶಸ್ತಿ ಗೆದ್ದ ಆಟಗಾರ ಎನಿಸಿದ್ದಾರೆ.

ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧ ಅಂತ್ಯಗೊಂಡ ಆ್ಯಂಡರ್ಸನ್-ತೆಂಡೂಲ್ಕರ್ ಟ್ರೋಫಿಯಲ್ಲಿ ಅಮೋಘ ಪ್ರದರ್ಶನ ನೀಡಿದ್ದ ಗಿಲ್, ಜುಲೈ ತಿಂಗಳ ಅವಧಿಯಲ್ಲಿ ಆಡಿದ ಮೂರು ಪಂದ್ಯಗಳಲ್ಲಿ 94.50ರ ಸರಾಸರಿಯಲ್ಲಿ 567 ರನ್ ಕಲೆ ಹಾಕಿದ್ದರು. ಆರು ಇನಿ

ಹೆತ್ತ ಮಗನನ್ನೇ ಕೊಂದು ಮನೆ ಹಿಂದೆ ಹೂತಿದ್ದ ತಂದೆ

» ಮೊದಲನೇ ಪುಟದಿಂದ

ಕೇಳಿದರೂ ರಘು ಎಲ್ಲಿಗೋ ಹೋಗಿದ್ದಾನೆಂಬ ಅಸ್ಪಷ್ಟ ಉತ್ತರ ನೀಡುತ್ತಲ್ಲೇ ಎರಡು ವರ್ಷ ಕಾಲ ಕಳೆದಿದ್ದ. ಗುಂಡಿ ಮೇಲೆ ಸಿಮೆಂಟ್ ಶೀಟ್ ಹಾಕಿದ್ದರಿಂದ ಯಾರಿಗೂ ಸಂಶಯ ಬಂದಿರಲಿಲ್ಲ.

ಗಂಗಾಧರ ಸಾವಿನ ಬಳಿಕ ರಹಸ್ಯ ಬಯಲು

ಅನಾರೋಗ್ಯದಿಂದ ಗಂಗಾಧರ ಅವರು 2025ರ ಆ.2ರಂದು ಮೃತ ಪಟ್ಟಿದ್ದರು. ಅವರ ಅಂತ್ಯಕ್ರಿಯೆಗೆ ಬಂದಿದ್ದ ಸಂಬಂಧಿಕರು ಹಾಗು ಗ್ರಾಮ ಸ್ಥರು ರಘುಗೆ ಕರೆ ಮಾಡಿ ಅಂತಿಮ ದರ್ಶನಕ್ಕೆ ಕರೆ ಸುವಂತೆ ರೂಪೇಶ್‌ಗೆ ಹೇಳಿದಾಗ ಆತ ಹೌಹಾರಿದ್ದ. ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ವೆಂಬುದನ್ನು ಅರಿತು ಘಟನೆ ತಂದೆಯ ಹೀನ ಕೃತ್ಯ ವಿವರಿಸಿದ್ದ. ಪ್ರಕರಣ ದಾಖಲಿಸಿ ಕೊಂಡಿದ್ದ ಪೊಲೀಸರು ಮಂಗಳವಾರ ಶೋಧ ಕಾರ್ಯ ನಡೆಸಿದರು.

ಜೀವಕ್ಕೆ ಹೆದರಿ ಸುಮ್ಮನಿದ್ದ ರೂಪೇಶ್

ಅಣ್ಣನನ್ನು ತಂದೆಯೇ ಕೊಂದ ವಿಚಾರ ವನ್ನು ಆಗಲೇ ಹೇಳಿದ್ದರೆ ರೂಪೇಶ್ ಕಾನೂ ನು ಶಿಕ್ಷೆಯಿಂದ ಬಚಾವಾಗುತ್ತಿದ್ದ. ಗ್ರಾಮ ದಲ್ಲಿ ಕಿರಾಣಿ ಅಂಗಡಿ ಇಟ್ಟುಕೊಂಡಿರುವ ಆತ ತಂದೆ ಹಾಕಿದ ಜೀವ ಬೆದರಿಕೆಗೆ ಹೆದರಿ ಏನೂ ನಡೆದಿಲ್ಲವೆಂಬಂತೆ ಸುಮ್ಮನಿದ್ದ. ಈಗ ಪುತ್ರ ನನ್ನು ಹತ್ಯೆಗೈದ ತಂದೆ ಮೃತಪಟ್ಟಿದ್ದು, ರೂಪೇಶ್‌ಗೆ ಕಾನೂನು ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. ಮಂಗಳವಾರ ಬೆಳಿಗ್ಗೆ ಗ್ರಾಮಕ್ಕೆ ಆಗಮಿಸಿದ ಪೊಲೀಸರು ಮನೆ ಸುತ್ತಲೂ ಬೇಲಿ ಹಾಕಿ ಸಾರ್ವ ಜನಿಕ ಪ್ರವೇಶ ನಿಷೇಧಿ ಸಿದ್ದರು. ಕಾರ್ಮಿಕರ ನೆರವಿ ನಿಂದ ಗುಂಡಿ ಅಗೆದಾಗ ರಘುನ ಅಸ್ಥಿಪಂಜರ ಪತ್ತೆಯಾ ಗಿದ್ದು, ಹಿಮ್ಸ್‌ಗೆ ರವಾನಿಸಲಾಗಿದೆ. ಸಕಲೇಶಪುರ ಉಪವಿಭಾಗಾಧಿಕಾರಿ ಶೃತಿ ಕಾರ್ಯಾಚರಣೆ ಪರಿಶೀಲಿಸಿದರು.

ಹೊಸ ಆದಾಯ ತೆರಿಗೆ ಮಸೂದೆಗೆ ಅಂಗೀಕಾರ

• ಪ್ರಜೋದಯ ವರದಿ

ನವದೆಹಲಿ: ಸಂಸತ್ತು ಮಂಗಳವಾರ ಹೊಸ ಆದಾಯ ತೆರಿಗೆ ಮಸೂದೆ 2025 ಅನ್ನು ಅಂಗೀಕರಿಸಿದೆ. ಇಂದು ರಾಜ್ಯಸಭೆಯಲ್ಲಿ ವಿಧೇಯಕ ಅಂಗೀಕಾರವಾಗಿದ್ದು, ರಾಷ್ಟ್ರ ಪತಿಗಳ ಅಂಕಿತ ಪಡೆಯಬೇಕಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಅವರು ಆದಾಯ ತೆರಿಗೆ ಮಸೂದೆ, 2025 ಮತ್ತು ತೆರಿಗೆ ಕಾನೂನುಗಳು (ತಿದ್ದುಪಡಿ) ಮಸೂದೆ, 2025 ಈ ಎರಡು ಹಣಕಾಸು ಮಸೂದೆಗಳನ್ನು ಮಂಡಿಸಿದ್ದರು.

ರಾಜ್ಯಸಭೆಯು ಧ್ವನಿ ಮತದೊಂದಿಗೆ ಹೊಸ ಆದಾಯ ತೆರಿಗೆ ಮಸೂದೆಯನ್ನು ಅಂಗೀಕರಿಸಿದೆ. ಹೊಸ ಆದಾಯ ತೆರಿಗೆ ಮಸೂದೆಯು ಆದಾಯ ತೆರಿಗೆ ಕಾಯ್ದೆ 1961 ಅನ್ನು ಬದಲಾಯಿಸುತ್ತದೆ. ಆದಾಯ ತೆರಿಗೆ ಕಾನೂನಿನಂತಹ ಪ್ರಮುಖ ಮಸೂದೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸದ ವಿರೋಧ ಪಕ್ಷಗಳ ವಿರುದ್ಧ ಸೀತಾರಾಮನ್ ಅವರು ತೀವ್ರ ವಾಗ್ದಾಳಿ ನಡೆಸಿದರು. ವಿರೋಧ ಪಕ್ಷಗಳು ಚರ್ಚೆಯಲ್ಲಿ ಭಾಗವಹಿಸಲು ಬಯಸದಿರುವುದು ಆಘಾತಕಾರಿ ಎಂದು ಅವರು ಹೇಳಿದ್ದಾರೆ.

ನಿರ್ಮಲಾ ಸೀತಾರಾಮನ್ ಸೋಮ ವಾರ ಸಂಸದೀಯ ಆಯ್ಕೆ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಈ ಮಸೂದೆ ಯನ್ನು ಮಂಡಿಸಿದ್ದರು. ನೂತನ ಮಸೂದೆಯು ಹಳೆಯ ಕಾಯ್ದೆಯನ್ನು ಸಂಪೂರ್ಣವಾಗಿ ಬದಲಿಸುವ ಗುರಿ ಹೊಂದಿದ್ದು, ತೆರಿಗೆ ವ್ಯವಸ್ಥೆಯನ್ನು ಸರಳ ಗೊಳಿಸುವ ಹಾಗೂ ಡಿಜಿಟಲೀಕರಣ ಗೊಳಿಸುವ ಉದ್ದೇಶವನ್ನು ಹೊಂದಿದೆ.

ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದ ಸಂಸತ್ತಿನ ಸ್ಥಾಯಿ ಸಮಿತಿಯು ಈ ಹಿಂದೆ ಮಂಡನೆ ಮಾಡಲಾಗಿದ್ದ ಆದಾಯ ತೆರಿಗೆ ಮಸೂದೆ -2025ಕ್ಕೆ ಹಲವಾರು ಬದಲಾವಣೆಗಳನ್ನು ಶಿಫಾರಸು ಮಾಡಿತ್ತು.

ತೆರಿಗೆ ಪದ್ಧತಿಯನ್ನು ಸರಳಗೊಳಿಸು ವುದು ಮತ್ತು ಆದಾಯ ತೆರಿಗೆ ಕಾನೂನನ್ನು ಹೆಚ್ಚು ಸ್ಪಷ್ಟಪಡಿಸುವ ಉದ್ದೇಶದಿಂದ ಸಮಿತಿಯು ಒಟ್ಟು 285 ಶಿಫಾರಸುಗಳನ್ನು ಮಾಡಿತ್ತು. ಈ ಸಮಿತಿಯ ವರದಿಯಲ್ಲಿ ಒಟ್ಟು 566 ಸಲಹೆಗಳು, ಶಿಫಾರಸು ಗಳಿದ್ದವು.

ಆಶಾ ಕಾರ್ಯಕರ್ತೆಯರಿಂದ ಅಹೋರಾತ್ರಿ ಧರಣಿ

ಮಾಸಿಕ ಗೌರವ ಧನ 10 ಸಾವಿರ ರೂ.ಗೆ ಹೆಚ್ಚಿಸುವಂತೆ ಒತ್ತಾಯ

• ಪ್ರಜೋದಯ ವರದಿ

ಹಾಸನ: ಆಶಾ ಕಾರ್ಯಕರ್ತೆಯರಿಗೆ ರಾಜ್ಯದ ಗೌರವಧನ ಮತ್ತು ಕೇಂದ್ರದ ಪ್ರೋತ್ಸಾಹ ಧನ ಸೇರಿಸಿ ಮಾಸಿಕ ಕನಿಷ್ಠ 10 ಸಾವಿರ ರೂ. ಗೌರವ ಧನ ನೀಡಬೇಕೆಂದು ಒತ್ತಾಯಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರದಿಂದ ಅಹೋರಾತ್ರಿ ಧರಣಿ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ ಕನಿಷ್ಠ 10 ಸಾವಿರ ರೂ. ಗ್ಯಾರಂಟಿಯನ್ನು ಏಪ್ರಿಲ್‌ನಿಂದ ಅನ್ವಯವಾಗುವಂತೆ ಆದೇಶ ಹೊರಡಿಸಬೇಕು. 2025 ಮಾರ್ಚ್ ರಾಜ್ಯ ಬಜೆಟ್‌ನಲ್ಲಿ ಎಲ್ಲಾ ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರಿಗೆ 1,000 ರೂ. ಪ್ರೋತ್ಸಾಹಧನ ಹೆಚ್ಚಳ ಮಾಡಿ ದಂತೆಯೇ ಎಲ್ಲಾ ಆಶಾ ಕಾರ್ಯ ಕರ್ತೆಯರಿಗೂ ಸಹ ಹೆಚ್ಚಳ ಮಾಡಬೇಕೆಂದು ಆಗ್ರಹಿಸಿದರು.

ತರ್ಕಬದ್ಧಗೊಳಿಸುವ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುವ ಜನಸಂಖ್ಯೆಯ ಮಿತಿ

ಯನ್ನು ಹೆಚ್ಚಿಸುವುದನ್ನು ಕೈಬಿಡ ಬೇಕು. ಈ ಹೆಸರಲ್ಲಿ ಯಾವುದೇ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯಬಾರದು. ಅವೈಜ್ಞಾನಿಕ ಆಶಾ ಕಾರ್ಯಕರ್ತೆಯರ ಕಾರ್ಯ ನಿರ್ವ ಹಣಾ ಮೌಲ್ಯಮಾಪನ ಕೈಬಿಡಬೇಕು. ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸ ಬೇಕು. ಅವೈಜ್ಞಾನಿಕ ಆಶಾ ಪರ್ಫಾ ಮೆನ್ಸ್ ಅಪ್ರೈಸಲ್ ಕೈಬಿಡಬೇಕೆಂದು ಮನವಿ ಮಾಡಿದರು.

ನಿವೃತ್ತ ಆಶಾ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳ ಮಾದರಿಯಲ್ಲಿ ಇಡಿಗಂಟು ನೀಡಬೇಕು, ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ 2000 ರೂ. ಗೌರವಧನ ಹೆಚ್ಚಿಸಬೇಕು. 2025ರಲ್ಲಿ ಕೇಂದ್ರ ಸರ್ಕಾರ ಹೆಚ್ಚಿಸಿದ ಆಶಾ ಪ್ರೋತ್ಸಾಹ ಧನವನ್ನು ರಾಜ್ಯ ದಲ್ಲಿ ಜಾರಿಗೊಳಿಸಬೇಕು. ಜನಸಂಖ್ಯೆ ಮಿತಿ, ಅವೈಜ್ಞಾನಿಕ ಮೌಲ್ಯಮಾಪನ, ಶಿಕ್ಷಣದ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯನ್ನು ಕೈಬಿಡುವ ಹುನ್ನಾರದ ಆದೇಶ ವಾಪಾಸ್ ಪಡೆಯಬೇಕೆಂದು ಆಗ್ರಹಿಸಿದರು.

ಪತ್ನಿ ಹತ್ಯೆಗೆ ಯತ್ನಿಸಿದ ಪತಿ ಬಂಧನಕ್ಕೆ ಆಗ್ರಹ

• ಪ್ರಜೋದಯ ವರದಿ

ಹಾಸನ: ಪತ್ನಿಯ ಮೇಲೆ ಸೀಮೆಎಣ್ಣೆ ಸುರಿದು ಕೊಲೆಗೆ ಯತ್ನಿಸಿ ತಲೆಮರೆಸಿ ಕೊಂಡಿರುವ ಆರೋಪಿಯನ್ನು ಬಂಧಿಸುವಂತೆ ಮಹಿಳಾ ಧ್ವನಿ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷೆ ಅನ್ನಪೂರ್ಣಗೌಡ ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕು ಶೆಟ್ಟಿಹಳ್ಳಿ ಗ್ರಾಮದ ಸುಶ್ಮಿತಾ ಅವರನ್ನು ಆರು ತಿಂಗಳ ಹಿಂದೆ ಸಕಲೇಶಪುರ ತಾಲ್ಲೂಕು ಹೊಸೂರು ಗ್ರಾಮದ ಶ್ರೀಮಂತ್ ಎಂಬಾತನಿಗೆ ಮದುವೆ ಮಾಡಿ ಕೊಡಲಾಗಿತ್ತು. ಆತ ಮದುವೆಯಾದ ಗಿನಿಂದಲೂ ಸುಶ್ಮಿತಾಳಿಗೆ ಕಿರುಕುಳ ನೀಡುತ್ತಿದ್ದ. ಜು.30 ರಂದು ಇದೇ ವಿಚಾರಕ್ಕೆ ಜಗಳ ತೆಗೆದು ಸುಶ್ಮಿತಾ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆಗೆ ಯತ್ನಿಸಿದ್ದಾನೆಂದು ಆರೋಪಿಸಿದರು.

ಈ ಸಂಬಂಧ ಯಸಳೂರು ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಪೊಲೀಸರು ಆರೋಪಿ ವಿರುದ್ಧ ಕ್ರಮಕೈಗೊಂಡಿಲ್ಲ. ಈ ಬಗ್ಗೆ ಪೊಲೀಸರನ್ನು ಪ್ರಶ್ನಿಸಿದರೆ ನೀವೇ ಆರೋಪಿಯನ್ನು ಹುಡುಕಿಕೊಡಿ ಎಂದು ಉಡಾಫೆಯಿಂದ ಮಾತ ನಾಡು ತ್ತಾರೆ. ತಲೆಮರೆಸಿಕೊಂಡಿರುವ ಆರೋಪಿ ಶ್ರೀಮಂತನನ್ನು ಬಂಧಿಸಿ ಜೈಲಿಗೆ ಕಳಿಸಬೇಕು ಹಾಗು ಆರೋಪಿ ಬಂಧಿಸುವಲ್ಲಿ ನಿರ್ಲಕ್ಷ್ಯ ವಹಿಸಿರುವ ಯಸಳೂರು ಠಾಣೆ ಪಿಎಸ್‌ಐ ಹಾಗು ವೃತ್ತ ನಿರೀಕ್ಷಕರನ್ನು ಅಮಾನತು ಗೊಳಿಸಬೇಕು. ಇಲ್ಲದಿದ್ದರೆ ಸಂಘಟನೆ ವತಿಯಿಂದ ಜಿಲ್ಲಾ ಪೊಲೀಸ್ ವರಿ ಷ್ಠಾಧಿಕಾರಿ ಕಚೇರಿ ಎದುರು ಪ್ರತಿ ಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸಂಘಟನೆ ಉಪಾಧ್ಯಕ್ಷೆ ಜ್ಯೋತಿ, ನಿರ್ದೇಶಕರಾದ ನೇತ್ರ, ರೇಣುಕಾ, ಸಂತ್ರಸ್ತೆ ಸುಶ್ಮಿತಾ, ಶಶಿಕಲಾ ಇದ್ದರು.

ನಾಗಮೋಹನ ದಾಸ್ ವರದಿ ಮರು ಪರಿಶೀಲನೆಗೆ ಆಗ್ರಹ

• ಪ್ರಜೋದಯ ವರದಿ

ಹಾಸನ: ಪರಿಶಿಷ್ಟ ಜಾತಿ ಒಳಮೀಸ ಲಾತಿ ವಿಚಾರದಲ್ಲಿ ನಾಗಮೋಹನ ದಾಸ್ ಅವರು ಸರ್ಕಾರಕ್ಕೆ ನೀಡಿರುವ ವರದಿ ಅವೈಜ್ಞಾನಿಕವಾಗಿದೆ. ವರದಿ ಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಬಲಗೈ ಸಂಬಂಧಿತ ಜಾತಿಗಳ ಒಕ್ಕೂಟದ ವತಿಯಿಂದ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾ ಯಿತು.

ದಲಿತ ಮುಖಂಡ ಹೆಚ್.ಕೆ. ಸಂದೇಶ್ ಅವರು ಮಾತನಾಡಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದ ಸಮಿತಿ ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಮೀಕ್ಷೆ ವರದಿ ಅವೈಜ್ಞಾನಿಕವಾಗಿದ್ದು, ಬಲಗೈ ಸಮುದಾಯಕ್ಕೆ ಅನ್ಯಾಯ ವಾಗಿದೆ. ನಾಗಮೋಹನ್ ದಾಸ್ ಅವರು ಹೊಲಯ ಸಮುದಾಯಕ್ಕೆ ಮರಣ ಶಾಸನ ವರದಿ ನೀಡಿದ್ದಾರೆ. ಈ ವರದಿಯನ್ನು ಜಾರಿ ಮಾಡಿದರೆ ಬಲಗೈ ಸಮುದಾಯದ ಮುಂದಿನ ಪೀಳಿಗೆ ಮೀಸಲಾತಿ ಅವಕಾಶಗಳಿಂದ ವಂಚಿತವಾಗಲಿದೆ. ಹೀಗಾಗಿ ಈ ವರದಿಯನ್ನು ಯಥಾವತ್ತಾಗಿ ಜಾರಿ ಮಾಡದೇ ತಿರಸ್ಕರಿಸಬೇಕು. ಉಪ

ಸಮಿತಿ ರಚಿಸಿ ಮರು ಪರಿಶೀಲಿಸ ಬೇಕೆಂದು ಆಗ್ರಹಿಸಿದರು.

ಪರಿಶಿಷ್ಟ ಜಾತಿ ಬಲಗೈ ಸಮು ದಾಯ ಕಡಿಮೆ ಇದ್ದು, ಎಡಗೈ ಸಮುದಾಯ ಹೆಚ್ಚಿದೆ ಎಂಬುದಾಗಿ ವರದಿ ನೀಡಿದ್ದಾರೆ. ನಾಗಮೋಹನ್ ದಾಸ್ ನೀಡಿರುವ ಒಳ ಮೀಸಲಾತಿ ವರದಿಯು ಅವೈಜ್ಞಾನಿಕವಾಗಿದೆ. ಅದನ್ನು ಜಾರಿ ಮಾಡುವ ಮೊದಲು ರಾಜ್ಯ ಸರ್ಕಾರ ಪುನರ್ ಪರಿ ಶೀಲಿಸಲು ಉಪ ಸಮಿತಿಯನ್ನು ರಚನೆ ಮಾಡಿ ವೈಜ್ಞಾನಿಕವಾಗಿ ದತ್ತಾಂಶವನ್ನು ಸಂಗ್ರಹಿಸಿ ನಂತರ ಒಳ ಮೀಸಲಾತಿ ವರದಿಯನ್ನು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಬಲಗೈ ಸಮುದಾಯ ಹೊಲಯ ಎಂಬುದಾಗಿ ಜಾತಿ ನೋಂದಾಯಿಸಿ ದ್ದೇವೆ. ಅಲ್ಲದೇ, ಬಲಗೈ ಸಮುದಾ ಯದವರು ಹೊಲಯ ಎಂಬುವುದರ ಜತೆಗೆ ಛಲವಾದಿ, ಆದಿಕರ್ನಾಟಕ, ಆದಿದ್ರಾವಿಡ, ಏಕೆ ಎಂಬುದಾಗಿ ಉಪಜಾತಿನೋಂದಾಯಿಸಿದ್ದಾರೆಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಸಚಿವ ಸಂಪುಟ ಕರೆದು ನಾಗಮೋಹನ್ ದಾಸ್ ಅವರ ಏಕಸದಸ್ಯ ವಿಚಾರಣಾ ಆಯೋಗವು ಸಲ್ಲಿಸಿರುವ ಸಮೀಕ್ಷೆ ವರದಿ ಪುನರ್ ಪರಿಶೀಲಿಸಿ ಕ್ರಮಕೈಗೊಳ್ಳಬೇಕು. ಇಲ್ಲ ದಿದ್ದರೆ ರಾಜ್ಯದಾದ್ಯಂತ ದಲಿತ ಸಮು ದಾಯ ಪ್ರತಿಭಟನೆ ಮಾಡಬೇಕಾಗು ತ್ತದೆ ಎಂದು ಎಚ್ಚರಿಸಿದರು. ಹುಡಾ ಮಾಜಿ ಅಧ್ಯಕ್ಷ ಕೃಷ್ಣಕುಮಾರ್, ದಲಿತ ಮುಖಂಡರಾದ ಕುಮಾರ್ ಗೌರವ್, ವಕೀಲ ರಾಜೇಶ್, ವಿಜಯ್ ಕುಮಾರ್ ಮತ್ತಿತರರು ಇದ್ದರು.

ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ಕುಸಿತ : ಆರೋಪ

» ಮೊದಲನೇ ಪುಟದಿಂದ

ಹರ್ ಘರ್ ತಿರಂಗ ಯಾತ್ರೆ

ಆಪರೇಷನ್ ಸಿಂಧೂರ, ಆಪರೇಷನ್ ಮಹದೇವ್ ಯಶಸ್ಸಿಗೆ ಕಾರಣವಾದ ಭಾರತೀಯ ಸೇನೆಯ ಯೋಧರ ಸೌರ್ಯ, ಸಾಹಸಕ್ಕೆ ಈ ಬಾರಿಯ ಹರ್ ಘರ್ ತಿರಂಗ ಯಾತ್ರೆಯನ್ನು ಸಮರ್ಪಿಸಲಾಗುತ್ತಿದೆ. ಆ.13, 14 ಮತ್ತು 15 ರಂದು ಪ್ರತಿ ಮನೆಗಳ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಲಾಗುವುದೆಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಕಾರ್ಯದರ್ಶಿ ಅಮಿತ್ ಶೆಟ್ಟಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ, ಮುಖಂಡರಾದ ಆಡುವಳ್ಳಿ ಪ್ರಕಾಶ್, ಸಚಿನ್, ಅರ್ಷಿತ್, ರಾಜಕುಮಾರ್, ನೇತ್ರಾವತಿ ಮತ್ತಿತರರು ಹಾಜರಿದ್ದರು.

ಧರ್ಮಸ್ಥಳ, ವೀರೇಂದ್ರ ಹೆಗ್ಗಡೆ ಮೇಲೆ ಜೈನಮಠಕ್ಕೆ ನಂಬಿಕೆ ಇದೆ

» ಮೊದಲನೇ ಪುಟದಿಂದ

ಜೈನಮಠದ ಸಂಪೂರ್ಣ ಬೆಂಬಲ ಘೋಷಿಸುವುದಾಗಿ ತಿಳಿಸಿದ್ದಾರೆ.

ಪವಿತ್ರ ಕ್ಷೇತ್ರ ಹಾಗು ಪವಿತ್ರ ವ್ಯಕ್ತಿತ್ವದ ವಿರುದ್ಧ ತಪ್ಪು ಮತ್ತು ಅವ ಹೇಳನಕಾರಿ ಹೇಳಿಕೆಗಳು ಪ್ರಸಾರವಾ ಗುತ್ತಿರುವುದು ಅತ್ಯಂತ ಖೇದಕರ. ಧರ್ಮ-ಸಂಸ್ಕೃತಿಗೆ ಅವಮಾನಕಾರಿ ಯಾಗಿದೆ. ಇಂತಹ ಹೇಳಿಕೆಗಳು ಸಮಾಜದಲ್ಲಿ ಭಿನ್ನಾಭಿಪ್ರಾಯ, ದ್ವೇಷ, ಅಸಮಾಧಾನ ಹುಟ್ಟಿಸುತ್ತವೆ. ಇದು ಕೇವಲ ಹೆಗ್ಗಡೆಯವರ ಮೇಲೆ ಆಗುತ್ತಿರುವ ಅವಮಾನವಲ್ಲ, ನಮ್ಮ ಸಂಸ್ಕೃತಿ, ನಮ್ಮ ಧರ್ಮ, ನಮ್ಮ ಸೇವಾ ಪರಂಪರೆಯ ಮೇಲಿನ ಅವ ಮಾನವಾಗಿದೆ ಎಂದು ಎಲ್ಲಾ ಧರ್ಮಾ ಭಿಮಾನಿಗಳು ಅರಿಯಬೇಕಿದೆ ಎಂದು ಎಚ್ಚರಿಸಿದ್ದಾರೆ.

ಸಮಾಜದಲ್ಲಿ ಅಸತ್ಯ ಪ್ರಚಾರ, ತಪ್ಪು ಮಾಹಿತಿ ಹಂಚಿಕೆ ಮತ್ತು ಅವಹೇಳನಕಾರಿ ನಡವಳಿಕೆ ಗಳನ್ನು ತಡೆಯಲು ಎಲ್ಲಾ ಧರ್ಮಗಳ ಧರ್ಮಗುರುಗಳು, ಧರ್ಮಾಭಿಮಾನಿ ಗಳು ಧರ್ಮದ ಪರ ಕಂಕಣಬದ್ಧರಾಗಿ ನಿಲ್ಲುವಂತೆ ಅಪೇಕ್ಷಿಸುತ್ತೇವೆಂದು ತಿಳಿಸಿದ್ದಾರೆ.

ಸಮಾಜದ ಎಲ್ಲಾ ವರ್ಗದವರು ಪರಸ್ಪರ ಗೌರವದಿಂದ, ಸತ್ಯಾಸತ್ಯತೆ ಪರಿಶೀಲಿಸಿ, ಸೌಹಾರ್ದತೆ ಉಳಿಸಿ ಕೊಂಡು ನಡೆದುಕೊಳ್ಳಬೇಕು. ಧರ್ಮಸ್ಥಳ ಕ್ಷೇತ್ರದ ಮೇಲೆ ಹಾಗು ವೀರೇಂದ್ರ ಹೆಗ್ಗಡೆ ಅವರೊಂದಿಗೆ ನಮ್ಮ ಬೆಂಬಲ ಸದಾಕಾಲ ಅಚಲವಾಗಿ ರುತ್ತದೆ ಎಂದು ತಿಳಿಸಿದ್ದಾರೆ.

ವಜಾಕ್ಕೆ ಕಾರಣ ನೀಡಿ: ಕಲಾಪ ಕೋಲಾಹಲ

» ಮೊದಲನೇ ಪುಟದಿಂದ

ಬಿಜೆಪಿಯನ್ನು ಪ್ರಶ್ನಿಸಿದರು. ಯಾವುದೇ ಸಚಿವರನ್ನು ಸರ್ಕಾರದಿಂದ ತೆಗೆದುಹಾಕಲು ನಿಮ್ಮ ಅನುಮತಿ ಪಡೆಯಬೇಕೇ. ಯಾರನ್ನಾದರೂ ಸಂಪುಟದಿಂದ ತೆಗೆದುಹಾಕುವುದು ಅಥವಾ ಸೇರಿಸಿಕೊಳ್ಳುವುದು ಮುಖ್ಯಮಂತ್ರಿಯ ವಿಶೇಷ ಹಕ್ಕು. ಅದಕ್ಕೂ ನಿಮಗೂ ಏನು ಸಂಬಂಧ ಎಂದು ಕಿಡಿಕಾರಿದರು.

ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ಬಿಜೆಪಿ ಶಾಸಕರು, ಯತ್ನಾಳ್ ಅವರನ್ನು ಪಕ್ಷದಿಂದ ತೆಗೆದುಹಾಕಲಾಯಿತು ಮತ್ತು ಅವರು ಸಂಪುಟದಲ್ಲಿ ಸಚಿವರಾ ಗಿರಲಿಲ್ಲ. ಇದು ಮುಖ್ಯಮಂತ್ರಿಯ ನಿರ್ಧಾರವಾಗಿದ್ದರೆ, ಅದು ಸರಿಯಾಗುತ್ತಿತ್ತು. ಆದರೆ, ಇದು ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಎಂದು ಹೇಳಲಾಗುತ್ತದೆ. ಆದ್ದರಿಂದ ಇದನ್ನು ಚರ್ಚಿಸಬೇಕೆಂದು ಪಟ್ಟು ಹಿಡಿದರು. ಈ ನಡುವೆ ಸ್ಪೀಕರ್ ಎರಡೂ ಕಡೆಯವರನ್ನು ಸಮಾಧಾನ ಪಡಿಸಲು ಮಧ್ಯಪ್ರವೇಶಿಸಿ ಸದನದ ಕಲಾಪವನ್ನು ಮುಂದುವರೆಸಿದರು.

ಸ್ವರ್ಣಗೌರಮ್ಮ ಜಾತ್ರಾ ಮಹೋತ್ಸವ ಸಿದ್ಧತೆಗೆ ಚಾಲನೆ

• ಪ್ರಜೋದಯ ವರದಿ

ಅರಸೀಕೆರೆ: ನಾಡಿನಾದ್ಯಂತ ಗಣಪ ನನ್ನು ಹೊತ್ತು ಮೆರೆಸಲು ಭಕ್ತರು ಸಿದ್ಧತೆಯಲ್ಲಿ ತೊಡಗಿ ದ್ದರೆ ಇತ್ತ ತಾಲ್ಲೂಕಿನ ಮಾಡಾಳು ಗ್ರಾಮದಲ್ಲಿ ಮೂಲಸ್ಥಾನ ಸ್ವರ್ಣ ಗೌರಮ್ಮ ದೇವಿ ಸೇವಾ ಸಮಿತಿಯವರು ಗಣಪತಿ ಅಮ್ಮ ಗೌರಮ್ಮ ದೇವಿಯನ್ನು ದರ್ಬಾರಿನಲ್ಲಿ ಮೆರೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ರಾಜ್ಯದ ಲಕ್ಷಾಂತರ ಮಂದಿ ಭಕ್ತರ ಆರಾಧ್ಯ ದೇವತೆ ಹಾಗೂ ಶಕ್ತಿ ಸ್ವರೂ ಪಿಣಿ ಎಂದೇ ಮನೆ ಮನೆ ಮಾತಾಗಿ ರುವ ಮಾಡಾಳು ಮೂಲಸ್ಥಾನ ಸ್ವರ್ಣ ಗೌರಮ್ಮನವರ 166ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಸೋಮವಾರ